ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಆಗಸ್ಟ್ 19, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 97 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999




## ಮೀಸಲಾತಿಗಾಗಿ ಮತ್ತೆ ಹೋರಾಟ

### ಶ್ರಾವಣ ಮಾಸದ ಇಷ್ಟಲಿಂಗ ಪೂಜೆಯೊಂದಿಗೆ ಹೋರಾಟ ಆರಂಭ



ದಾವಣಗೆರೆ, ಆ. 18- ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿಗಾಗಿ ಒತ್ತಾಯಿಸಿ ಶ್ರಾವಣ ಮಾಸದ ಇಷ್ಟಲಿಂಗ ಪೂಜೆಯೊಂದಿಗೆ ಮತ್ತೆ ಹೋರಾಟ ಆರಂಭಿಸುವುದಾಗಿ ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಂಚಮಸಾಲಿ ಸಮುದಾಯಕ್ಕೆ 2ಎ ಅಥವಾ ರಾಜ್ಯ ಸರ್ಕಾರ ನೂತನವಾಗಿ ಸೃಷ್ಟಿಸಿರುವ 2ಡಿ ಅಡಿ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿ ಹೋರಾಟ ನಡೆಸಲಾಗುವುದು ಎಂದರು.

ಈ ಹಿಂದೆ 2ಎ ಮೀಸಲಾತಿಗಾಗಿ ಹೋರಾಟ ನಡೆಸಿದ್ದೆವು. ಆದರೆ, ಸರ್ಕಾರ ಕೊನೆ ಗಳಿಗೆಯಲ್ಲಿ ನಮ್ಮ ಬೇಡಿಕೆಗೆ ಮಣಿದು 2ಡಿ ಸೃಷ್ಟಿಸಿ ಅದರ ಅಡಿಯಲ್ಲಿ ಮೀಸಲಾತಿ ಕಲ್ಪಿಸುವುದಾಗಿ ಹೇಳಿತ್ತು. ಈಗ ಅದೂ ಸಹ ನೆನೆಗುದಿಗೆ ಬಿದ್ದಿರುವುದರಿಂದ ಸಮುದಾಯಕ್ಕೆ ನಿರಾಸೆಯಾಗಿದೆ ಎಂದು ಹೇಳಿದರು.

ಆದ್ದರಿಂದ ಮತ್ತೆ ವಿನೂತನ ಹೋರಾಟಕ್ಕೆ ಮುಂದಾಗಿದ್ದೇವೆ. ಆದರೆ, ಯಾವ ಭಾಗದಿಂದ ಈ ಹೋರಾಟ ಆರಂಭಿಸಬೇಕೆನ್ನುವುದರ ಬಗ್ಗೆ ಇಂದು (ಆ.18 ರಂದು) ಮಧ್ಯಾಹ್ನ ಬೆಳಗಾವಿಯಲ್ಲಿ ನಡೆಯುವ ಸಭೆಯಲ್ಲಿ ತೀ ರ್ಮಾ ನಿ ಸ ಲಾ ಗು ವು ದು ಎಂದು ಹೇಳಿದರು.

ಪಂಚಮಸಾಲಿ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸಬೇಕೆಂಬುದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ್ದೆವು. ಅವರು ಅಧಿವೇಶನದ ಬಳಿಕ ಕಾನೂನು ತಜ್ಞರ ಸಭೆ ಕರೆದು ಚರ್ಚಿಸಿ, ಪರಿಶೀಲಿಸುವುದಾಗಿ ಹೇಳಿದ್ದರು. ಈಗ ಅಧಿವೇಶನ ಮುಗಿದು ತಿಂಗಳು ಸಮೀಪಿಸುತ್ತಾ ಬಂದರೂ ಸಭೆ ಕರೆದಿಲ್ಲ ಎಂದರು. ಕಳೆದ ಚುನಾವಣೆಯಲ್ಲಿ ಪಂಚಮಸಾಲಿಗಳು ಸಿದ್ದರಾಮಯ್ಯ ಅವರಿಗೆ ಆಶೀರ್ವಾದ ಮಾಡಿದ್ದಾರೆ. ಹೀಗಾಗಿ, 2024ರ ಲೋಕಸಭೆ ಚುನಾವಣೆಯೊಳಗೆ ಪಂಚಮಸಾಲಿ ಸಮುದಾಯಕ್ಕೆ 2ಎ ಅಥವಾ 2ಡಿ ಅಡಿಯಲ್ಲಿ (2ನೇ ಪುಟಕ್ಕೆ)

### ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟಕ್ಕೆ ಸಂಪೂರ್ಣ ಬೆಂಬಲ

ಎಸ್.ಎಸ್. ಜಾಮ್ದಾರ್ ಅವರು ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟದ ಮುಂಚೂಣಿ ವಹಿಸಿದ್ದಾರೆ. ಅದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಮೀಸಲಾತಿ ಕೊಡಿಸುವ ಹೋರಾಟದ ಮುಂದಾಳತ್ವ ವಹಿಸಿರು ವುದರಿಂದ ಪ್ರತ್ಯೇಕ ಧರ್ಮದ ಹೋರಾಟದಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲಾಗುತ್ತಿಲ್ಲ ಎಂದು ಶ್ರೀಗಳು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆರ್ಥಿಕ, ಸಾಮಾಜಿಕ ಸಮೀಕ್ಷೆ ವರದಿ ಅನುಷ್ಠಾನಗೊಳಿಸುವುದಾಗಿ ಹೇಳುತ್ತಿದ್ದಾರೆ. ಇದಕ್ಕೆ ಲಿಂಗಾಯತರು- (2ನೇ ಪುಟಕ್ಕೆ)

## ಮುಂಗಾರಿನ ಹೆಬ್ಬಾಗಿಲಲ್ಲೇ ಮಳೆ ಇಲ್ಲ

ತಿರುವನಂತರಪುರಂ, ಆ. 18- ದೇಶದ ಮುಂಗಾರಿನ ಹೆಬ್ಬಾಗಿಲಾಗಿರುವ ಕೇರಳದಲ್ಲಿ ಶೇ.44ರಷ್ಟು ಕಡಿಮೆ ಮಳೆಯಾಗಿದೆ. ರಾಜ್ಯ ಇತ್ತೀಚಿನ ವರ್ಷಗಳಲ್ಲೇ ತೀವ್ರ ಬರ ಪರಿಸ್ಥಿತಿ ಎದುರಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೂನ್ 1ರಿಂದ ಆಗಸ್ಟ್ 16ರ ನಡುವೆ ಕೇರಳದಲ್ಲಿ ವಾಡಿಕೆಯ 1,572.1 ಮಿ.ಮೀ. ಬದಲು ಕೇವಲ 877.2 ಮಿ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಆಗಸ್ಟ್ 10ರಿಂದ 16ರ ನಡುವೆ ವಾಡಿಕೆಯ 109.6 ಮಿ.ಮೀ. ಬದಲು ಕೇವಲ 6.5 ಮಿ.ಮೀ. ಮಳೆಯಾಗಿದೆ. ಒಟ್ಟಾರೆ ಕೊರತೆ ಶೇ.94ರಷ್ಟಾಗಿದೆ.

ಕೇರಳದ ಅತಿ ದೊಡ್ಡ ಜಲ ವಿದ್ಯುತ್ ಯೋಜನೆ ಇರುವ ಇಡುಕ್ಕಿಯಲ್ಲಿ ವಾಡಿಕೆಗಿಂತ ಶೇ.60ರಷ್ಟು ಕಡಿಮೆ ಮಳೆಯಾಗಿದೆ. ಮುಂದಿನ ಎರಡು ವಾರಗಳಲ್ಲೂ ವಾಡಿಕೆಗಿಂತ ಮಳೆ ಕಡಿಮೆ ಇರಲಿದೆ ಎಂದು ಹವಾಮಾನ ಇಲಾಖೆಯ ಕೇರಳ ವಿಭಾಗದ ನಿರ್ದೇಶಕ ಕೆ. ಸಂತೋಷ್ ಹೇಳಿದ್ದಾರೆ.



**ಕೇರಳದಲ್ಲಿ 44% ಕೊರತೆ**

**ಇತ್ತೀಚಿನ ವರ್ಷಗಳಲ್ಲೇ ತೀವ್ರ ಬರ ಪರಿಸ್ಥಿತಿ ಎದುರಿಸುತ್ತಿರುವ ರಾಜ್ಯ**

ಕಳೆದ ವರ್ಷ ಇದೇ ಸಮಯಕ್ಕೆ ಇಡುಕ್ಕಿ ಜಲಾಶಯದಲ್ಲಿ ಶೇ.80.2ರಷ್ಟು ನೀರಿತ್ತು. ಈ ಬಾರಿ ಶೇ.31.13ರಷ್ಟು ಮಾತ್ರ ನೀರಿದೆ. ಒಳ ಹರಿವಿಲ್ಲದ ಕಾರಣ ಜಲ ವಿದ್ಯುತ್ ಉತ್ಪಾದನೆಯ ಮೇಲೆ ಪರಿಣಾಮವಾಗಿದೆ.

ಕುಡಿಯುವ ನೀರಿನ ಜಲಾಶಯಗಳ ಪರಿಸ್ಥಿತಿಯೂ ಅದೇ ರೀತಿ ಆಗಿದೆ. ಪ್ರಸಕ್ತ ಪೆಪ್ಪರ ಅಣೆಕಟ್ಟೆಯಲ್ಲಿ ಮುಂದಿನ 100 ದಿನಗಳಿಗೆ ಆಗುವಷ್ಟು ನೀರಿದೆ. ಮುಂಗಾರು ಮಳೆ ಚೇತರಿಸಿಕೊಳ್ಳದೇ ಹೋದರೆ ಪರಿಸ್ಥಿತಿ ಕಠಿಣವಾಗಲಿದೆ ಎಂದು ಕೇರಳ ಜಲ ಪ್ರಾಧಿಕಾರದ ಸಹಾಯಕ ಇಂಜಿನಿಯರ್ ಎಸ್. ಸೌಮ್ಯ ಹೇಳಿದ್ದಾರೆ.

ಇಡುಕ್ಕಿ ಹಾಗೂ ಪಾಲಕ್ಕಾಡ್‌ಗಳಲ್ಲಿ ಬೆಳೆ ಸಂಪೂರ್ಣ ಹಾನಿಯಾಗಿದೆ. ಈ ಭಾಗದ ಜನರೀಗ ಕುಡಿಯುವ ನೀರಿನ ಕುರಿತು ಕಳವಳಗೊಂಡಿದ್ದಾರೆ.

## ದಂಡ ಬಡ್ಡಿ ನಿಲ್ಲಿಸಲು ಸೂಚನೆ

ಮುಂಬೈ, ಆ. 18 – ಕೆಲ ಬ್ಯಾಂಕುಗಳು ಹಾಗೂ ಬ್ಯಾಂಕೇತರ ಸಂಸ್ಥೆಗಳು ದಂಡದ ಬಡ್ಡಿ ವಿಧಿಸುವ ಮೂಲಕ ಆದಾಯ ಹೆಚ್ಚಿಸಿಕೊಳ್ಳುತ್ತಿವೆ. ಸಾಲ ಬಾಕಿ ಉಳಿದ ಸಂದರ್ಭದಲ್ಲಿ ಸಕಾರಣವಾದ ದಂಡ ವಿಧಿಸಬೇಕೇ ಹೊರತು, ದಂಡದ ಬಡ್ಡಿ ವಿಧಿಸಬಾರದು ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಜನವರಿ 1, 2024ರ ನಂತರ ಬ್ಯಾಂಕುಗಳು ಹಾಗೂ ಇತರೆ ಸಾಲ ನೀಡುವ (2ನೇ ಪುಟಕ್ಕೆ)

## ಹೊಸ ಪಡಿತರ ಕಾರ್ಡ್‌ಗಳು ಸದ್ಯಕ್ಕಿಲ್ಲ

ಬೆಂಗಳೂರು, ಆ. 18 - ಹೊಸ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿಗಳು ಸದ್ಯಕ್ಕಿಲ್ಲ ಎಂದಿರುವ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್.ಮುನಿಯಪ್ಪ, ಇಲಾಖೆಗೆ ಹೊಸದಾಗಿ 2181 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದ್ದಾರೆ.

ಇಲಾಖಾ ಪ್ರಗತಿ ಪರಿಶೀಲನೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮಗೆ ಹೊಸದಾಗಿ ಪಡಿತರ ಚೀಟಿ ಕೋರಿ ಬಂದಿರುವ ಸುಮಾರು ಮೂರು ಲಕ್ಷ ಅರ್ಜಿಗಳು ವಿಲೇವಾರಿ ಆಗುವವರೆಗೂ ಹೊಸ ಅರ್ಜಿ ಸ್ವೀಕರಿಸುವುದೂ ಇಲ್ಲ, ನೀಡುವುದೂ ಇಲ್ಲ ಎಂದು (2ನೇ ಪುಟಕ್ಕೆ)

## 40% ಆರೋಪದ ತನಿಖೆಗೆ ಆದೇಶ

ಬೆಂಗಳೂರು, ಆ. 18 – ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇ.40ರಷ್ಟು ಕಮೀಷನ್ ಪಡೆಯಲಾಗುತ್ತಿತ್ತು ಎಂಬ ಆರೋಪಗಳ ನ್ಯಾಯಾಂಗ ತನಿಖೆಗೆ ರಾಜ್ಯ ಸರ್ಕಾರ ಆದೇಶಿಸಿದೆ. ಹೈಕೋರ್ಟ್ ನಿವೃತ್ತ ನ್ಯಾಯ ಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದ ತನಿಖಾ ಸಮಿತಿ ರಚಿಸಲಾಗಿದೆ. ಸಮಿತಿಯು ದೊಡ್ಡ ಪ್ರಮಾಣದ ಸಾರ್ವಜನಿಕ ಕಾಮಗಾರಿಗಳು ನಡೆದ ಇಲಾಖೆಗಳಲ್ಲಿ ತನಿಖೆ ನಡೆಸಲಿದೆ. 40 ಪರ್ಸೆಂಟ್ ಕಮೀಷನ್ ಕೇಳಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಒಕ್ಕೂಟ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿತ್ತು. ಈ ವಿಷಯವನ್ನು ಕಾಂಗ್ರೆಸ್ ಚುನಾವಣಾ ಸಮಯದಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಿತ್ತು.

## ಕೊನೆ ಭಾಗಕ್ಕೆ ತಲುಪದ ನೀರು ಕಾಲುವೆಯಲ್ಲಿ ರೈತರ ಪ್ರತಿಭಟನೆ

ಮಲೇಬೆನ್ನೂರು, ಆ. 18- ಭದ್ರಾ ಅಚ್ಚುಕಟ್ಟು ಪ್ರದೇಶದ ಮುಂಗಾರು ಹಂಗಾಮಿನ ಬೆಳೆಗಳಿಗೆ ಜಲಾಶಯದಿಂದ ನೀರು ಬಿಟ್ಟು 8 ದಿನಗಳು ಕಳೆದರೂ ಕೊನೆ ಭಾಗಕ್ಕೆ ಇನ್ನೂ ನೀರು ತಲುಪದಿರುವುದಕ್ಕೆ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

14ನೇ ಉಪ ಕಾಲುವೆಯ ಕೆ ಎನ್ ಹಳ್ಳಿ , ಪಾಳ್ಯ, ಹೊಳೆಸಿರಿಗೆರೆ ಗ್ರಾಮಗಳ ವ್ಯಾಪ್ತಿಯ ಕಾಲುವೆಗಳಿಗೆ ಈವರೆಗೂ ನೀರು ಬಂದಿಲ್ಲ. ಇದು ರೈತರ ಅಸಮಾಧಾನಕ್ಕೆ ಕಾರಣವಾಗಿದ್ದು, ಗುರುವಾರ ಕೆ ಎನ್ ಹಳ್ಳಿ ಬಳಿ ಬರಿದಾದ ಕಾಲುವೆಯಲ್ಲಿ ನಿಂತು ಆಕ್ರೋಶ ವ್ಯಕ್ತಪಡಿಸಿದ ರೈತರು, ಇಂಜಿನಿಯರ್‌ಗಳ ನಿರ್ಲಕ್ಷ್ಯ ವಹಿಸಿದ್ದಾರೆಂದು ದೂರಿದರು. ಶಾಸಕರು, ನೀರಾವರಿ ಅಧಿಕಾರಿಗಳು ರೈತರ ಸಮಸ್ಯೆ ಕಡೆ ಗಮನ ಹರಿಸಬೇಕು ಎಂದು ಆಗ್ರಹಿಸಿದ್ದಾರೆ. ಇಲ್ಲದಿದ್ದರೆ ನೀರಾವರಿ ಇಲಾಖೆಗೆ ಮುತ್ತಿಗೆ ಹಾಕುವುದಾಗಿ ರೈತರು (2ನೇ ಪುಟಕ್ಕೆ)


## 'ಒಕ್ಕೂಟ ಸರ್ಕಾರ'ದ ಅರ್ಜಿಗೆ ಕೇಂದ್ರದ ವಿರೋಧ

ನವದೆಹಲಿ, ಆ. 18 – ಕೇಂದ್ರ ಸರ್ಕಾರ ಎಂಬ ಪದ ಬಳಸುವುದನ್ನು ನಿಲ್ಲಿಸಿ, ಆ ಜಾಗದಲ್ಲಿ 'ಒಕ್ಕೂಟ ಸರ್ಕಾರ' ಎಂಬ ಪದ ಬಳಸಬೇಕು ಎಂದು ದೆಹಲಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಅರ್ಜಿಯನ್ನು ಕೇಂದ್ರ ಸರ್ಕಾರ ವಿರೋಧಿಸಿದೆ. ಕೇಂದ್ರ ಸರ್ಕಾರದ ಎಲ್ಲಾ ಆದೇಶಗಳು, ಅಧಿಸೂಚನೆಗಳು ಹಾಗೂ ಸಂವಹನಗಳಲ್ಲಿ ಒಕ್ಕೂಟ ಸರ್ಕಾರ ಎಂಬ ಪದ ಬಳಸಬೇಕೆಂದು (2ನೇ ಪುಟಕ್ಕೆ)

## ಸಿಟಿ ಕೋ-ಆಪರೇಟಿವ್ ಬ್ಯಾಂಕ್‌ಗೆ ಎನ್.ಜೆ. ಗುರುಸಿದ್ದಯ್ಯ ಅಧ್ಯಕ್ಷ

### ಉಪಾಧ್ಯಕ್ಷರಾಗಿ ನಿರಂಜನ ನಿಶಾನಿಮಠ ಆಯ್ಕೆ





ದಾವಣಗೆರೆ,ಆ.18- ನಗರದ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಎನ್.ಜೆ. ಗುರುಸಿದ್ದಯ್ಯ, ಉಪಾಧ್ಯಕ್ಷರಾಗಿ ನಿರಂಜನ ನಿಶಾನಿಮಠ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಗುರುಸಿದ್ದಯ್ಯ ಅವರ ಹೆಸರನ್ನು ನಿರ್ದೇಶಕ ಕೆ.ಎಸ್. ಮಹೇಶ್ವರಪ್ಪ ಸೂಚಿಸಿದಾಗ, ನಿರ್ದೇಶಕ ವಿಕಾಸ್ ಕುಮಾರ್ ಅನುಮೋದಿಸಿದರು. ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ನಿರಂಜನ ನಿಶಾನಿಮಠ ಅವರ ಹೆಸರನ್ನು ನಿರ್ದೇಶಕ ಎನ್.ವಿ. ಬಂಡಿವಾಡ ಸೂಚಿಸಿದಾಗ, ನಿರ್ದೇಶಕ ಕೆ. ಆರ್. ರವೀಂದ್ರನಾಥ್ ಅನುಮೋದಿಸಿದರು.

ಬ್ಯಾಂಕಿನ ಸಭಾಂಗಣದಲ್ಲಿ ಸಹಕಾರ ಸಂಘಗಳ ಇಲಾಖೆಯ ಸಹಕಾರ ಅಭಿವೃದ್ಧಿ ಅಧಿಕಾರಿಯೂ ಆಗಿರುವ ಚುನಾವಣಾ ಧಿಕಾರಿ ಜಿ.ಎಸ್. ಸುರೇಂದ್ರ ಅವರ ಉಪಸ್ಥಿತಿಯಲ್ಲಿ ಇಂದು ನಡೆದ ಬ್ಯಾಂಕಿನ ನೂತನ ಆಡಳಿತ ಮಂಡಳಿಯ ಪ್ರಥಮ ಸಭೆಯಲ್ಲಿ ಈ ಆಯ್ಕೆ ಸರ್ವಾನುಮತದಿಂದ ನಡೆಯಿತು.

ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರುಗಳಾದ (2ನೇ ಪುಟಕ್ಕೆ)


## ಬಿ.ಎಸ್. ಕೊಟ್ರಮ್ಮ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್, ಹಳೇ ಆರ್‌ಟಿಓ ಹತ್ತಿರದ ವಾಸಿ ಬಿಎಸ್ಸೆನ್ನೆಲ್ ನಿವೃತ್ತ ಅಧಿಕಾರಿ **ಎ.ಟಿ. ಮುರುಗೇಶ್** ಅವರ ಧರ್ಮಪತ್ನಿ **ಶ್ರೀಮತಿ ಬಿ.ಎಸ್. ಕೊಟ್ರಮ್ಮ** ಅವರು ದಿನಾಂಕ 18.08.2023ರ ಶುಕ್ರವಾರ ಸಂಜೆ 6.30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.08.2023ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**94485-67567, 94498-55542**



# ದುಶ್ಚಟಗಳನ್ನು ತ್ಯಾಗ ಮಾಡಿದರೆ ಜಗತ್ತಿಗೆ ಮಾದರಿಯಾಗಬಹುದು




ಕೊಮಾರನಹಳ್ಳಿ : ಮದ್ಯವರ್ಜನೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಶ್ರೀ ಶಾರದೇಶಾನಂದ ಸ್ವಾಮೀಜಿ ಕಿವಿಮಾತು

ಮಲೇಬೆನ್ನೂರು, ಆ.18- ಬದುಕಿನಲ್ಲಿ ತ್ಯಾಗ ಮಾಡಿದ ವ್ಯಕ್ತಿಗಳು ಜಗತ್ತಿಗೆ ಮಾದರಿಯಾಗಿದ್ದಾರೆ. ನೀವೂ ಕೂಡ ದುಶ್ಚಟಗಳನ್ನು ತ್ಯಾಗ ಮಾಡಿದರೆ ಸಮಾಜದಲ್ಲಿ ಮಾದರಿ ವ್ಯಕ್ತಿಗಳಾಗುತ್ತೀರಿ ಎಂದು ಹರಿಹರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದಜೀ ಮಹಾರಾಜ್ ಶಿಬಿರಾರ್ಥಿಗಳಿಗೆ ಸ್ಫೂರ್ತಿಯ ಮಾತುಗಳನ್ನು ಹೇಳಿದರು.

ಅವರು ಶುಕ್ರವಾರ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ದೇವಸ್ಥಾನದ ಸಮುದಾಯ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಸ್ಥಳೀಯ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 1705 ನೇ ಮದ್ಯವರ್ಜನೆ ಶಿಬಿರದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಿಮ್ಮ ಬಗ್ಗೆ ನಿಮಗೆ ಸ್ವಾಭಿಮಾನ ಇರಬೇಕು. ನಿಮ್ಮ ಭವಿಷ್ಯ ಸಂತೋಷ, ಆರೋಗ್ಯದ ಜೊತೆಗೆ ನಿಮ್ಮ ಮನಸ್ಸು ಕೂಡ ನಿಮ್ಮ ಕೈಯ್ಯಲ್ಲಿದೆ. ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡರೆ ಯಾವ ತಪ್ಪುಗಳನ್ನೂ ನೀವು ಮಾಡುವುದಿಲ್ಲ. ಈ ದಿನ ನೀವು ನಿಮ್ಮ ಸ್ವ-ಇಚ್ಛೆಯಿಂದ ನಾವು ಇನ್ನೆಂದು ದುಶ್ಚಟಗಳನ್ನು ಮಾಡುವುದಿಲ್ಲ ಎಂದು ಸಂಕಲ್ಪ ಮಾಡಿ ಮನೆಗೆ ಹೋಗಿ. ನಾಳೆಯಿಂದ ಹೊಸ ಬದುಕು ರೂಪಿಸಿಕೊಳ್ಳಿ ಎಂದು ಸ್ವಾಮೀಜಿ ಕಿವಿಮಾತು ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ವೀರೇಂದ್ರ ಹೆಗ್ಗಡೆ ಅವರು ಇಂತಹ ಅನೇಕ ಜನಪರ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಆದರೆ ಒಳ್ಳೆಯದನ್ನು ಸಹಿಸದ ಮೂರ್ಖರು ಅವರ ಬಗ್ಗೆಯೂ ಅಪಪ್ರಚಾರ ಮಾಡುತ್ತಿರುವುದು ಖಂಡನೀಯ ಎಂದರು.

ಜನರ ಭಾವನೆಗಳಿಗಿಂತ ದೊಡ್ಡ ಶಕ್ತಿ ಮತ್ತೊಂದಿಲ್ಲ. ಹಾಗಾಗಿಯೇ ಜನರು ಧರ್ಮಸ್ಥಳ ಸೇರಿದಂತೆ ಅನೇಕ ಪುಣ್ಯಕ್ಷೇತ್ರಗಳಿಗೆ ಭಕ್ತಿ-ಭಾವದೊಂದಿಗೆ ಸ್ವಯಂ ಪ್ರೇರಣೆಯಿಂದ ತೆರಳುತ್ತಾರೆ. ಅಂತಹ ಧರ್ಮಸ್ಥಳಕ್ಕೆ ನೀವು ಕೃತಜ್ಞರಾಗಿರಬೇಕು. ಏಕೆಂದರೆ ಈ ಶಿಬಿರ ನಿಮ್ಮ ಬದುಕಿಗೆ ಹೊಸ ರೂಪ ನೀಡಲಿದೆ ಎಂದು ಶಿಬಿರಾರ್ಥಿಗಳಿಗೆ ಶ್ರೀ ಶಾರದೇಶಾನಂದ ಮಹಾರಾಜ್ ಶುಭ ಹಾರೈಸಿದರು.


ಪ್ರಸ್ತುತ ಯುವ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ದುಶ್ಚಟಗಳಿಗೆ ಬಲಿಯಾಗುತ್ತಿದ್ದು, ಭವಿಷ್ಯದ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಈ ಶಿಬಿರದ ಮೂಲಕ ನೀವು ಬದಲಾವಣೆ ಆಗಿರುವುದು ನಮ್ಮ ಕಣ್ಣಿಗೆ ಕಾಣುತ್ತಿದೆ ಎಂದರು.


ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಎಎಸ್ಐ ಶ್ರೀನಿವಾಸ್, ಧರ್ಮಸ್ಥಳ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ್ ಮಾತನಾಡಿದರು.

ಮದ್ಯವರ್ಜನೆ ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಅಧ್ಯಕ್ಷತೆ ವಹಿಸಿದ್ದರು.

ಹಾಲಿವಾಣ ಗ್ರಾ.ಪಂ. ಅಧ್ಯಕ್ಷ ಡಿ.ಡಿ. ಚಿಕ್ಕಣ್ಣ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಧರ್ಮಸ್ಥಳ ಯೋಜನೆ ಯೋಜನಾಧಿಕಾರಿ ವಸಂತ್ ದೇವಾಡಿಗ, ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ಕುಲಾಲ್, ಶಿಬಿರಾಧಿಕಾರಿ ವಿದ್ಯಾಧರ್, ಆರೋಗ್ಯ ಸಹಾಯಕಿ ನೇತ್ರಾವತಿ, ಶಿಬಿರದ ವ್ಯವಸ್ಥಾಪನಾ ಸಮಿತಿ ಗೌರವಾಧ್ಯಕ್ಷ ಹುಗ್ಗಿ ರಂಗನಾಥ್, ಕಾರ್ಯದರ್ಶಿ ಹಾಗೂ ಮೇಲ್ವಿಚಾರಕಿ ರಕ್ಷಿತಾ, ಕೊಕ್ಕನೂರು ಒಕ್ಕೂಟದ ಅಧ್ಯಕ್ಷ ಹನುಮಂತರಾಯ, ಜಿಗಳಿ ಒಕ್ಕೂಟದ ಅಧ್ಯಕ್ಷ ಎನ್. ಬಸವರಾಜ್, ಮಲೇಬೆನ್ನೂರು ಒಕ್ಕೂಟದ ಅಧ್ಯಕ್ಷೆ ಚಂದ್ರಮ್ಮ, ವ್ಯವಸ್ಥಾಪನಾ ಸಮಿತಿಯ ಉಪಾಧ್ಯಕ್ಷರಾದ ಕೊಕ್ಕನೂರು ಸೋಮಶೇಖರ್, ಭಾನುವಳ್ಳಿ ಸುರೇಶ್, ಆನಂದಚಾರಿ, ಬೆಣ್ಣೆಹಳ್ಳಿ ಬಸವರಾಜ್, ಮಲ್ಲಿಕಾರ್ಜುನ್ ಕಲಾಲ್, ಶಿವಕ್ಕ ಆಂಜನೇಯ, ಜಿಲ್ಲಾ ಜನ ಜಾಗೃತಿ ವೇದಿಕೆಯ ಸದಸ್ಯರಾದ ಕೊಂಡಜ್ಜಿ ರಾಜಶೇಖರ್, ಜಿಗಳಿ ಪ್ರಕಾಶ್, ಸಂಪನ್ಮೂಲ ವ್ಯಕ್ತಿ ಹೆಚ್.ಎಂ. ಸದಾನಂದ್, ತಾ. ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸವಿತಾ, ವಲಯ ಮೇಲ್ವಿಚಾರಕರಾದ ಸಂಪತ್‌ಲಕ್ಷ್ಮಿ, ಹರೀಶ್, ಮಾರುತಿ, ಚಂದ್ರಪ್ಪ, ರಂಗಸ್ವಾಮಿ, ರಂಜಿತಾ, ಸಂತೋಷಿನಿ, ಕೃಷಿ ಮೇಲ್ವಿಚಾರಕ ಗಂಗಾಧರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಕೈ ಹಿಡಿಯಲಿರುವ ಸೋಮಶೇಖರ್, ಹೆಬ್ಬಾರ್





ಬೆಂಗಳೂರು, ಆ. 18 - ಹೆಚ್.ಡಿ.ಕುಮಾರಸ್ವಾಮಿ ಸರ್ಕಾರ ಉರುಳಿಸಿ, ಬಿಜೆಪಿ ಜತೆ ಕೈಜೋಡಿಸಿದ್ದ ಮಾಜಿ ಸಚಿವರಾದ ಎಸ್.ಟಿ.ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಅವರು, ತಮ್ಮ ವಿಧಾನ ಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ಮುಂದಾಗಿ ದ್ದಾರೆ. ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ ನಂತರ ಮತ್ತೆ ತಮ್ಮ ಮಾತೃ ಪಕ್ಷ ಕಾಂಗ್ರೆಸ್‌ಗೆ ಹಿಂದಿರುಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯ ಉಸ್ತುವಾರಿ ಹೊಣೆ ಹೊತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಜತೆ ಇಬ್ಬರೂ ಬಿಜೆಪಿ ಶಾಸಕರು ಮಾತುಕತೆ ನಡೆಸಿ ಹಸ್ತ ಲಾಘವ ಮಾಡಲು ಸಮ್ಮತಿಸಿದ್ದಾರೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸದ್ಯಕ್ಕೆ ಪ್ರವಾಸದಲ್ಲಿದ್ದು, ಅವರು ರಾಜಧಾನಿಗೆ ಮರಳಿದ ನಂತರ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಉಭಯ ಶಾಸಕರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನ ಗಳಿಸಲೇಬೇಕೆಂದು ಗುರಿ ಇಟ್ಟುಕೊಂಡಿರುವ ರಾಜ್ಯ ಕಾಂಗ್ರೆಸ್ ನಾಯಕರು ಶೇಕಡವಾರು ಮತ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಆಪರೇಷನ್ ಹಸ್ತಕ್ಕೆ ಮುಂದಾಗಿದ್ದಾರೆ. ಲೋಕಸಭಾ ಕ್ಷೇತ್ರಗಳನ್ನು ಗೆಲ್ಲಲ್ಲೇಬೇಕು ಎಂದು ಆಯ್ಕೆ ಮಾಡಿರುವ ಕ್ಷೇತ್ರಗಳಲ್ಲೇ ಈ ಆಪರೇಷನ್ ಹಸ್ತ ನಡೆಯುತ್ತಿದೆ. ಈಗಾಗಲೇ 10-12 ಪ್ರತಿಪಕ್ಷಗಳ ಶಾಸಕರ ಜತೆ ಖುದ್ದು ಶಿವಕುಮಾರ್ ಹಾಗೂ ಅವರ ಆಪ್ತರು ಮಾತುಕತೆ ನಡೆಸಿ ವೇದಿಕೆ ಸಿದ್ಧಪಡಿಸಿದ್ದಾರೆ.

ಇವರು ಆಯ್ಕೆ ಮಾಡಿರುವ ಸದಸ್ಯರಲ್ಲಿ ಕೆಲವರನ್ನು ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳಲು ಕೆಲವು ಕಾಂಗ್ರೆಸ್ ನಾಯಕರು ವಿರೋಧ ವ್ಯಕ್ತಪಡಿಸಿದ್ದಾರೆ.

ಆದರೆ, ಇದ್ಯಾವುದಕ್ಕೂ ಸೊಪ್ಪು ಹಾಕದ ಶಿವಕುಮಾರ್ ಮತ್ತು ಸುರ್ಜೇವಾಲಾ ಅವರು ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಒಂದಲ್ಲಾ ಒಂದು ಅಸ್ತ್ರ ಬಳಸಿ ಇಲ್ಲವೇ ಸ್ನೇಹ ಪೂರ್ವಕವಾಗಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದಾರೆ. ಮೊದಲ ಹಂತದಲ್ಲಿ ಈ ಇಬ್ಬರು ಶಾಸಕರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಲಿದ್ದು, ಇದೇ ಸಂದರ್ಭದಲ್ಲಿ ಮತ್ತಷ್ಟು ಮಂದಿ ಸೇರ್ಪಡೆ ಮಾಡುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ.

## ಬರಿದಾದ ಕಾಲುವೆಯಲ್ಲಿ ಪ್ರತಿಭಟನೆ

**(1ನೇ ಪುಟದಿಂದ)** ಎಚ್ಚರಿಸಿದ್ದಾರೆ.

ಭತ್ತ ಕಟಾವಿಗೆ ಬರಲು ಕನಿಷ್ಠ ನೂರು ದಿನಗಳ ಕಾಲ ನೀರು ಹರಿಸಬೇಕು. ನೂರು ದಿನ ನೀರು ಬಿಡಲು ಸಮಿತಿ ತೀರ್ಮಾನ ಮಾಡಿದೆ. ಆದರೆ, ನೀರು ಹರಿಸಲು ಪಾಳಿ ಪದ್ಧತಿ ಅನುಸರಿಸದ ಕಾರಣ, ಯಾವ ಉಪ ಕಾಲುವೆಗೂ ಸಮರ್ಪಕವಾಗಿ ನೀರು ಬರುತ್ತಿಲ್ಲ ಎಂದು ರೈತರು ಬೇಸರ ವ್ಯಕ್ತ ಪಡಿಸಿದ್ದಾರೆ.

ನಾಲೆಗಳಿಗೆ ನೀರು ಬಿಡುಗಡೆ ಮಾಡಿ ಈಗಾಗಲೇ 8 ದಿನಗಳು ಕಳೆದಿವೆ. ಕೂಡಲೇ ಕೊನೆ ಭಾಗಕ್ಕೆ ನೀರು ತಲುಪಿಸಲು ಇಂಜಿನಿಯರ್ ಗಳು ಸೂಕ್ತ ಕ್ರಮಕ್ಕೆ ಮುಂದಾಗಬೇಕು. ರೈತರು ಕೊಳವೆಬಾವಿ ನೀರು ಬಳಸಿ ಈಗಾಗಲೇ ಸಸಿ ಮಡಿ ಸಿದ್ಧ ಮಾಡಿದ್ದಾರೆ. ಸಮರ್ಪಕವಾಗಿ ನೀರು ಹರಿಸಿದರೆ, ನಾಟಿ ಮಾಡಲು ಸಹಾಯವಾಗುತ್ತದೆ ಎಂದು ಹೇಳಿದ್ದಾರೆ. ರೈತರಾದ ವಿ. ರಾಮಪ್ಪ, ಎಸ್. ಲೋಕೇಶ್, ಕುಮಾರ್ ಗೋಡಿಹಾಳ್, ಸೋಮಲಿಂಗ, ಕುಶಪ್ಪ, ಶೇಖಣ್ಣ, ರಂಗಣ್ಣ, ಎಸ್. ಹನುಮಂತಪ್ಪ ಮತ್ತಿತರರಿದ್ದರು.

## ದಂಡ ಬಡ್ಡಿ ನಿಲ್ಲಿಸಲು ಸೂಚನೆ

**(1ನೇ ಪುಟದಿಂದ)** ಸಂಸ್ಥೆಗಳು ದಂಡದ ಬಡ್ಡಿ ವಿಧಿಸುವಂತಿಲ್ಲ ಎಂದು ರಿಸರ್ವ್ ಬ್ಯಾಂಕ್ ಹೊಸ ಸೂಚನೆಯಲ್ಲಿ ತಿಳಿಸಲಾಗಿದೆ.

ಸಾಲ ಬಾಕಿ ಉಳಿಸಿಕೊಂಡಲ್ಲಿ ದಂಡ ಶುಲ್ಕವನ್ನು ವಿಧಿಸಬೇಕು. ದಂಡ ಬಡ್ಡಿಯನ್ನು ಹೇರಬಾರದು. ಸಾಲಗಳಿಗೆ ಮಾತ್ರ ಬಡ್ಡಿ ಪಡೆಯಬೇಕು ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಆದರೆ, ಈ ಸೂಚನೆಗಳು ಕ್ರೆಡಿಟ್ ಕಾರ್ಡ್‌ಗಳು, ಹೊರಗಿನ ವಾಣಿಜ್ಯ ಸಾಲಗಳು, ವ್ಯಾಪಾರಿ ಸಾಲಗಳು ಹಾಗೂ ಉತ್ಪನ್ನ ನಿರ್ದಿಷ್ಟ ಬದ್ಧತೆಗಳಿಗೆ ಅನ್ವಯವಾಗುವುದಿಲ್ಲ ಎಂದು ತಿಳಿಸಲಾಗಿದೆ.

## ‘ಒಕ್ಕೂಟ ಸರ್ಕಾರ’ : ಕೇಂದ್ರದ ವಿರೋಧ

**(1ನೇ ಪುಟದಿಂದ)** ಅರ್ಜಿ ದಾಖಲಿಸಲಾಗಿದೆ.

ಇದು ಅನಗತ್ಯ ಖಟ್ಲೆಯಾಗಿದೆ, ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿ ತಳ್ಳಿ ಹಾಕಬೇಕು ಎಂದು ಕೇಂದ್ರ ಸರ್ಕಾರದ ಪರ ವಕೀಲರು ಮನವಿ ದಾಖಲಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಸಂಜೀವ್ ನರುಲ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ವಿಚಾರಣೆ ನಡೆಸುತ್ತಿದ್ದು, ಮುಂದಿನ ವಿಚಾರಣೆಯನ್ನು ಡಿಸೆಂಬರ್ 5ಕ್ಕೆ ನಿಗದಿ ಪಡಿಸಿದೆ.

ಕೊಲ್ಕೊತಾ ನಿವಾಸಿ ಆತ್ಮರಾಮ್ ಸರೋಗಿ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ಒಕ್ಕೂಟ ಸರ್ಕಾರ ಎಂಬ ಪದವು ಒಕ್ಕೂಟ ಹಾಗೂ ಎಲ್ಲಾ ರಾಜ್ಯಗಳ ನಡುವಿನ ಐಕ್ಯತೆಯನ್ನು ತೋರಿಸುತ್ತದೆ. ಅಧಿಕಾರ ಕೇಂದ್ರೀಕೃತವಾಗಿದೆ ಎಂಬ ಭಾವನೆ ನಿವಾರಿಸುತ್ತದೆ ಎಂದು ವಾದಿಸಿದ್ದಾರೆ. ಈ ಅರ್ಜಿಯಲ್ಲಿ ಯಾವುದೇ ಸಾರ್ವಜನಿಕ ಹಿತ ಕಾಣುತ್ತಿಲ್ಲ. ಕೇಂದ್ರ ಸರ್ಕಾರ ಎಂಬ ಪದ ಬಳಸದಂತೆ ಯಾವುದೇ ನಿಷೇಧ ಇಲ್ಲ ಎಂದು ಹೈಕೋರ್ಟ್ ವಿಚಾರಣೆಯ ಸಂದರ್ಭದಲ್ಲಿ ಹೇಳಿತ್ತು.

## ಅಪರಾಧ ಕುರಿತ ಮೂರು ಮಸೂದೆಗಳು ಸ್ಥಾಯಿ ಸಮಿತಿಗೆ

ನವದೆಹಲಿ, ಆ. 18 – ಕೇಂದ್ರ ಸರ್ಕಾರ ಮಂಡಿಸಿರುವ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಮಸೂದೆಗಳನ್ನು ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಅವರು ಗೃಹ ವ್ಯವಹಾರಗಳ ಸದನ ಸ್ಥಾಯಿ ಸಮಿತಿಗೆ ವಹಿಸಿದ್ದಾರೆ.

ಐ.ಪಿ.ಸಿ., ಸಿ.ಆರ್.ಪಿ.ಸಿ. ಹಾಗೂ ಸಾಕ್ಷ್ಯ ಕಾಯ್ದೆಗಳನ್ನು ಬದಲಿಸಲು ಈ ಮಸೂದೆಗಳನ್ನು ಮಂಡಿಸಲಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಆಗಸ್ಟ್ 11ರಂದು ಲೋಕಸಭೆಯಲ್ಲಿ ಮಸೂದೆಗಳನ್ನು ಮಂಡಿಸಿದ್ದರು. ಸಂಸತ್ತಿನ ಸ್ಥಾಯಿ ಸಮಿತಿಯು ರಾಜ್ಯಸಭೆ ಹಾಗೂ ಲೋಕಸಭೆ ಎರಡರ ಸದಸ್ಯರನ್ನೂ ಹೊಂದಿದೆ. ಬಿಜೆಪಿ ಸದಸ್ಯ ಬ್ರಿಜ್ ಲಾಲ್ ಅವರು ಗೃಹ ವ್ಯವಹಾರಗಳ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದಾರೆ.

## ವಿದ್ಯಾನಗರ ಇನ್ನರ್ ವ್ಹೀಲ್‌ನಿಂದ ಚಿಗಟೇರಿ ಆಸ್ಪತ್ರೆಯಲ್ಲಿ ‘ವಿಶ್ವ ಸ್ತನ್ಯಪಾನ ಸಪ್ತಾಹ’



ದಾವಣಗೆರೆ, ಆ. 18- ವಿದ್ಯಾನಗರ ಇನ್ನರ ವ್ಹೀಲ್ ಸಂಸ್ಥೆ ವತಿಯಿಂದ ನಗರದ ಚಿಗಟೇರಿ ಸರ್ಕಾರಿ ಆಸ್ಪತ್ರೆಯಲ್ಲಿ ‘ವಿಶ್ವ ಸ್ತನ್ಯಪಾನ ಸಪ್ತಾಹ’ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮಕ್ಕಳ ತಜ್ಞ ಡಾ. ರಾಘವೇಂದ್ರ ಅವರು ಸ್ತನ್ಯಪಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿದರು. ಮತ್ತೊರ್ವ ಮಕ್ಕಳ ತಜ್ಞರಾದ ಡಾ. ಚೈತಾಲಿ ಮಾತನಾಡಿ, ಮಗು ಜನಿಸಿದ ಅರ್ಧ ಗಂಟೆಯಿಂದಲೇ ಮಗುವಿಗೆ ಎದೆ ಹಾಲು ಉಣಿಸಬೇಕು ಇದರಿಂದ ರೋಗ ನಿರೋಧಕ ಶಕ್ತಿ ಬರುತದೆ ಎಂದು ಜಾಗೃತಿ ಮೂಡಿಸಿದರು, ಇನ್ನರ್ ವ್ಹೀಲ್ ಅಧ್ಯಕ್ಷೆ ಶ್ರೀಮತಿ ಮಂಜುಳಾ ಕರ್ಜಗಿ ಮತ್ತು ಕಾರ್ಯದರ್ಶಿ ಶ್ರೀಮತಿ ಪ್ರೇಮಾ ಮಹೇಶ್ವರಪ್ಪ, ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

## ಸಿಟಿ ಕೋ-ಆಪರೇಟಿವ್ ಬ್ಯಾಂಕ್‌ಗೆ ಎನ್.ಜೆ. ಗುರುಸಿದ್ದಯ್ಯ ಅಧ್ಯಕ್ಷ

**(1ನೇ ಪುಟದಿಂದ)** ಬಿ.ಹೆಚ್. ಪರಶುರಾಮಪ್ಪ, ಶ್ರೀಮತಿ ಪಂಕಜಾ ವೀರಯ್ಯ, ಶ್ರೀಮತಿ ಆರ್. ಕೌಶಲ್ಯ, ಶ್ರೀಮತಿ ಲತಾ ಹಾಲೇಶ್, ಹೆಚ್.ವಿ. ವಿರೂಪಾಕ್ಷ, ಬಿ.ಜೆ. ಅಭಿಷೇಕ್ ಅವರುಗಳು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

**ಎಸ್ಸೆಸ್ - ಎಸ್ಸೆಸ್ಸೆಂ ಅಭಿನಂದನೆ :** ನೂತನ ಅಧ್ಯಕ್ಷ ಗುರುಸಿದ್ದಯ್ಯ ಮತ್ತು ನೂತನ ಉಪಾಧ್ಯಕ್ಷ ನಿರಂಜನ ನಿಶಾನಿಮಠ ಅವರುಗಳನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಅಭಿನಂದಿಸಿ, ಇವರ ಆಡಳಿತದಿಂದ ಸಿಟಿ ಕೋ-ಕೋ ಆಪರೇಟಿವ್ ಬ್ಯಾಂಕ್ ಉತ್ತಮ ಹಣಕಾಸಿನ ಸಂಸ್ಥೆಯಾಗಿ ಬೆಳೆದು, ಜಿಲ್ಲೆ ಮತ್ತು ರಾಜ್ಯದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಲಿ ಎಂದು ಶುಭ ಹಾರೈಸಿದ್ದಾರೆ.

ಶಾಸಕರುಗಳಾದ ಹರಪನಹಳ್ಳಿಯ ಶ್ರೀಮತಿ ಎಂ.ಪಿ. ಲತಾ ಮತ್ತು ಶಿವಗಂಗಾ ಬಸವರಾಜು, ಕೆ.ಎಸ್. ಬಸವಂತಪ್ಪ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಮತ್ತಿತರರು ನೂತನ ಅಧ್ಯಕ್ಷ - ಉಪಾಧ್ಯಕ್ಷರನ್ನು ಅಭಿನಂದಿಸಿದ್ದಾರೆ.


## ಪುಣ್ಯಸ್ಮರಣೆ



ದಿ|| ಎಸ್.ಪಿ. ಸಂಗಪ್ಪ, ದಿ|| ಶ್ರೀಮತಿ ಸರ್ವಮಂಗಳಮ್ಮ

‘ಆದರ್ಶ ಜೀವನದ ಅಪೂರ್ವ ಉದಾಹರಣೆ ನೀವು’, ‘ನಿಮ್ಮ ಆದರ್ಶಗಳನ್ನು ಅನುಸರಿಸುತ್ತಾ ಧನ್ಯರು ನಾವು’.

ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಬಂಧು ವರ್ಗ


# ಬೌದ್ಧಿಕ ಬೆಳವಣಿಗೆಗೆ ಪೌಷ್ಟಿಕ ಆಹಾರ ಅಗತ್ಯ

## ಮೊಟ್ಟೆ, ಶೇಂಗಾ ಚಿಕ್ಕಿ ವಿತರಣೆ ಕಾರ್ಯಕ್ರಮದಲ್ಲಿ ಶಿಕ್ಷಣಾಧಿಕಾರಿ ಹನುಮಂತಪ್ಪ



ಹರಿಹರ

ಹರಿಹರ, ಆ.18- ವಿದ್ಯಾರ್ಥಿಗಳು ಪೌಷ್ಟಿಕ ಆಹಾರ ಸೇವನೆ ಮಾಡುವುದರಿಂದ ದೇಹದಲ್ಲಿ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಯಾಗಿ ಜ್ಞಾನ ಇಮ್ಮಡಿಯಾಗುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಹನುಮಂತಪ್ಪ ಹೇಳಿದರು.

ನಗರದ ಹೊರವಲಯದ ಗುತ್ತೂರು ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ಘೋಷಣೆ ಮಾಡಿರುವ ಬಾಳೆಹಣ್ಣು, ಮೊಟ್ಟೆ, ಸೇಂಗಾ ಚಿಕ್ಕಿ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಪ್ರಾಥಮಿಕ ಶಾಲೆಯ ಮಕ್ಕಳು ಅಪೌಷ್ಟಿಕ ಆಹಾರದಿಂದ ನರಳಬಾರದು ಎಂಬ ದೃಷ್ಟಿಯಿಂದ ಬಿಸಿ ಊಟದ ಜೊತೆಗೆ ಬಾಳೆ ಹಣ್ಣು, ಮೊಟ್ಟೆ, ಶೇಂಗಾ ಚಿಕ್ಕಿ ವಿತರಣೆ ಮಾಡಲಾಗುತ್ತಿತ್ತು. ಆದರೆ ಈಗ ರಾಜ್ಯ ಸರ್ಕಾರವು ಅದನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗೂ ವಿಸ್ತರಿಸಿ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿತರಣೆ ಮಾಡಲು ಮುಂದಾಗಿದ್ದು. ತಾಲ್ಲೂಕಿನ 153 ಸರ್ಕಾರಿ ಪ್ರೌಢಶಾಲೆ ಮತ್ತು 89 ಅನುದಾನಿತ ಶಾಲೆಗಳ 1 ರಿಂದ 8 ತರಗತಿಯ 21760 ವಿದ್ಯಾರ್ಥಿಗಳು ಸೇರಿದಂತೆ, ಒಟ್ಟು 27800 ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಪಡೆಯಲಿದ್ದಾರೆ ಎಂದರು.

ಸಿಂಡಿಕೇಟ್ ಮಾಜಿ ಸದಸ್ಯ ಟಿ. ಇನಾಯತ್ ಉಲ್ಲಾ ಮಾತನಾಡಿ, ಬಡವರ ಮಕ್ಕಳು ಶಿಕ್ಷಣದಿಂದ ವಂಚಿತವಾಗಬಾರದು ಎಂಬ ದೃಷ್ಟಿಯಿಂದ ಸರ್ಕಾರ ಹತ್ತಾರು ರೂಪದಲ್ಲಿ ಹಣವನ್ನು ಸಂಗ್ರಹ ಮಾಡಿ, ಶಿಕ್ಷಣ ಕ್ಷೇತ್ರಕ್ಕೆ ಬಳಸುತ್ತಿದ್ದು, ಅದನ್ನು ವಿದ್ಯಾರ್ಥಿಗಳು ಸರಿಯಾದ ರೀತಿಯಲ್ಲಿ ಸದ್ಬಳಕ್ಕೆ ಮಾಡಿಕೊಂಡು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತರಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ಬಿ.ಜಿ ನಾಗರಾಜ್, ಶಿಕ್ಷಣ ಇಲಾಖೆ ಹರೀಶ್ ನೋಟದರ್, ಹನುಮಂತಪ್ಪ, ಅಕ್ಷರ ದಾಸೋಹ ಇಲಾಖೆ ವೆಂಕಟೇಶ, ಮುಖ್ಯ ಶಿಕ್ಷಕ ಟಿ. ಸಿದ್ದಪ್ಪ, ಶಿಕ್ಷಕರಾದ ನಾಗರಾಜ್ ಪಿ, ಶ್ರೀಧರಮಯ್ಯ, ರೀನಾ ನಿಟುವಳ್ಳಿ, ಸೌಭಾಗ್ಯ, ಸುನಂದ, ಅನಿತಾ, ಸರಸ್ವತಿ, ಅರುಂಧತಿ, ಶೋಭಾ ಇತರರು ಹಾಜರಿದ್ದರು.

## 50 ಕೋಟಿ ದಾಟಿದ ಜನ್ ಧನ್ ಖಾತೆ

ನವದೆಹಲಿ, ಆ. 18 – ದೇಶದ ಜನ್ ಧನ್ ಖಾತೆಗಳ ಸಂಖ್ಯೆ 50 ಕೋಟಿ ದಾಟಿದೆ. ಈ ಪೈಕಿ ಶೇ.56ರಷ್ಟು ಖಾತೆಗಳು ಮಹಿಳೆಯರಿಗೆ ಸೇರಿದವು ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಶೇ.67ರಷ್ಟು ಖಾತೆಗಳನ್ನು ಗ್ರಾಮೀಣ ಹಾಗೂ ಪಟ್ಟಣಗಳಲ್ಲಿ ತೆರೆಯಲಾಗಿದೆ. ಈ ಖಾತೆಗಳಲ್ಲಿ 2.03 ಲಕ್ಷ ಕೋಟಿ ರೂ. ಹಣ ಜಮಾ ಮಾಡಲಾಗಿದೆ. ಈ ಖಾತೆಗಳಿಗೆ 34 ಕೋಟಿ ರುಪೇ ಕಾರ್ಡುಗಳನ್ನು ಉಚಿತವಾಗಿ ನೀಡಲಾಗಿದೆ.

## ಮೀಸಲಾತಿಗಾಗಿ ಮತ್ತೆ ಹೋರಾಟ

**(1ನೇ ಪುಟದಿಂದ)** ಮೀಸಲಾತಿ ಕಲ್ಪಿಸಲು ಶಿಫಾರಸ್ಸು ಮಾಡಬೇಕು ಹಾಗೂ ಲಿಂಗಾಯತ ಸಮುದಾಯದ ಎಲ್ಲ ಒಳ ಪಂಗಡಗಳನ್ನು ಕೇಂದ್ರ ಒಬಿಸಿ ಪಟ್ಟಿಯಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಪಂಚಮಸಾಲಿ ಸಮುದಾಯ ಋಣ ತೀರಿಸಬೇಕು ಎಂದು ಶ್ರೀಗಳು ಒತ್ತಾಯಿಸಿದರು.

## ಹೋರಾಟಕ್ಕೆ ಸಂಪೂರ್ಣ ಬೆಂಬಲ

**(1ನೇ ಪುಟದಿಂದ)** ಒಕ್ಕಲಿಗರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ನಾವಿನ್ನೂ ಆ ವರದಿಯನ್ನು ಓದಿಲ್ಲ. ಅದನ್ನು ಪೂರ್ಣ ಓದಿ, ಯಾವುದಾದರೂ ಸಮುದಾಯಕ್ಕೆ ಅದರಿಂದ ತೊಂದರೆಯಾಗುವುದಿದ್ದರೆ, ಅದನ್ನು ಪುನರ್ ಪರಾಮರ್ಶೆಗೆ ಒಳಪಡಿಸುವಂತೆ ಸಿಎಂಗೆ ಮನವಿ ಸಲ್ಲಿಸುತ್ತೇವೆ ಎಂದರು.

## ಮುರುಘಾ ಮಠದಲ್ಲಿ ಇಂದು ವಚನಾಭಿಷೇಕ

ಚಿತ್ರದುರ್ಗ ಮುರುಘಾ ಮಠದಲ್ಲಿ ಕರ್ತೃಗದ್ದುಗೆಗೆ ಇಂದಿನಿಂದ 1 ತಿಂಗಳ ಕಾಲ ಪ್ರತಿನಿತ್ಯ ಬೆಳಗ್ಗೆ ವಚನಾಭಿಷೇಕ ಜರುಗಲಿದೆ ಎಂದು ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದ್ದಾರೆ. ಇಂದಿನಿಂದ ಪ್ರತಿದಿನ ಅಥವಾ ವಾರಕ್ಕೆ ಎರಡು ದಿನ ಚಿಂತನ ಶ್ರಾವಣ ನಡೆಯಲಿದೆ.


|| ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಶಾಮನೂರು ವಾಸಿ
ಕುಂದುವಾಡದ ದಿ. ಶ್ರೀ ಹನುಮಂತಪ್ಪನವರ ಧರ್ಮಪತ್ನಿ ಶ್ರೀಮತಿ ಗಂಗಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿನಾಂಕ : 12.08.2023ನೇ ಶನಿವಾರ ರಾತ್ರಿ 9.54ಕ್ಕೆ ನನ್ನ ಪೂಜ್ಯ ಪತಿಯವರಾದ

**ಕುಂದುವಾಡದ ಶ್ರೀ ಹನುಮಂತಪ್ಪನವರು**

ಅಧ್ಯಕ್ಷರು,
ಶ್ರೀ ರಾಮಾಂಜನೇಯ ವಿದ್ಯಾಸಂಸ್ಥೆ, ದಾವಣಗೆರೆ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ : 20.08.2023ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಶ್ರೀ ಆಂಜನೇಯ ಸ್ವಾಮಿ ಕಲ್ಯಾಣ ಮಂಟಪ, ಶಾಮನೂರು ಇಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಕುಂದವಾಡದ ಶ್ರೀಮತಿ ಗಂಗಮ್ಮ ಹನುಮಂತಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮಗಳು-ಅಳಿಯ, ಮೊಮ್ಮಕ್ಕಳು, ಕುಂದುವಾಡದ ವಂಶಸ್ಥರು, ಶಾಮನೂರು ಹಾಗೂ ಬಂಧು ಮಿತ್ರರು. ಮೊ. 99729-84079, 83101-25359

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಹೊಸ ಪಡಿತರ ಕಾರ್ಡ್ ಸದ್ಯಕ್ಕಿಲ್ಲ

**(1ನೇ ಪುಟದಿಂದ)** ಹೇಳಿದರು. ಅನ್ನಭಾಗ್ಯ ಯೋಜನೆಯಡಿ ಪ್ರತಿ ಯುನಿಟ್‌ಗೆ 5 ಕೆ.ಜಿ. ಹೆಚ್ಚುವರಿ ಅಕ್ಕಿ ನೀಡುವ ವಿಚಾರ ಅಂತಿಮಗೊಳ್ಳುವ ವರೆಗೂ ಹೊಸ ಪಡಿತರ ಚೀಟಿ ಇಲ್ಲ ಎಂದೂ ಅವರು ಹೇಳಿದ್ದಾರೆ.

ನಾವು ಈಗಾಗಲೇ ಘೋಷಣೆ ಮಾಡಿರುವಂತೆ 10 ಕೆ.ಜಿ. ಆಹಾರಧಾನ್ಯ ನೀಡುತ್ತೇವೆ. ಅಕ್ಕಿ ಜತೆಗೆ ರಾಗಿ ಮತ್ತು ಜೋಳ ನೀಡಲು ಅಗತ್ಯವಿರುವ ಧಾನ್ಯ ದಾಸ್ತಾನು ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆದರೆ, ಇದಕ್ಕೂ ಮುನ್ನ ಎಷ್ಟು ಜನರಿಗೆ ಈ ಧಾನ್ಯದ ಅಗತ್ಯವಿದೆ ಎಂಬ ಮಾಹಿತಿ ಸಂಗ್ರಹ ಮಾಡಲು ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಇಲಾಖೆಯಲ್ಲಿ 3500ಕ್ಕೂ ಹೆಚ್ಚು ವಿವಿಧ ಹುದ್ದೆಗಳು ಖಾಲಿ ಇವೆ. 2181 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಸೂಚನೆ ನೀಡಿದ್ದೇವೆ ಎಂದರು.

ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಇಲಾಖೆಯ ಪ್ರತ್ಯೇಕ ಕಚೇರಿಯನ್ನು ತೆರೆದು ಸಹಾಯಕ ನಿರ್ದೇಶಕರನ್ನು ಮತ್ತು ಅಧೀನ ಸಿಬ್ಬಂದಿಯನ್ನು ನೇಮಕ ಮಾಡಲು ತೀರ್ಮಾನಿಸಿದ್ದೇವೆ. ಇದುವರೆಗೂ ಉಪ ತಹಸೀಲ್ದಾರ್ ಅವರೇ ನಮ್ಮ ಇಲಾಖೆಯ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದರು. ಕಂದಾಯ ಇಲಾಖೆಗೆ ನೀಡಿದ್ದ ಅಧಿಕಾರವನ್ನು ಹಿಂದಕ್ಕೆ ಪಡೆದು ನಾವೇ ಇಲಾಖೆ ಜವಾಬ್ದಾರಿ ನಿರ್ವಹಣೆ ಮಾಡುತ್ತೇವೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು. ಪ್ರತ್ಯೇಕ ಕಚೇರಿ ತೆರೆಯುವುದರಿಂದ ಪಡಿತರ ವಿತರಣೆ ಕಾರ್ಯ ಸಮರ್ಪಕವಾಗಿ ಮಾಡಲು ಮತ್ತು ಹೊಸ ಪಡಿತರ ಚೀಟಿ ವಿತರಣೆಗೆ ಸಹಾಯಕವಾಗಲಿದೆ. ಆಹಾರ ಇಲಾಖೆ ಕಚೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್ ನೇಮಕ ಮಾಡಲು ಮತ್ತು ಎಂಎಸ್‌ಪಿ ಖರೀದಿಯಲ್ಲಿ ಪಾರದರ್ಶಕತೆ ತರಬೇಕು ಹಾಗೂ ನೈಜತೆ ಗುಣಮಟ್ಟ ಕಾಪಾಡಲು ಸೂಚನೆ ನೀಡಿದ್ದೇನೆ ಎಂದರು.


ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ.ಹೆಚ್ಚುವರಿ ಅಕ್ಕಿ ನೀಡುವ ಬದಲು ತಾತ್ಕಾಲಿಕವಾಗಿ ಪ್ರತಿ ಯುನಿಟ್‌ಗೆ 170 ರೂ.ಗಳನ್ನು ಡಿಬಿಟಿ ಮೂಲಕ ಆ. 25, 26ರಂದು ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು ಎಂದು ಹೇಳಿದರು.

## ಕರೆಕಟ್ಟೆ ಗ್ರಾಮದ ಹೆಚ್.ಎಸ್. ರೇಣುಕಾ ನಿಧನ



ಚನ್ನಗಿರಿ ತಾಲ್ಲೂಕು ಕರೆಕಟ್ಟೆ ಗ್ರಾಮದ, ದಾವಣಗೆರೆ ವಿನಾಯಕ ಬಡಾವಣೆ, 6ನೇ ಕ್ರಾಸ್, ವಿದ್ಯಾನಗರದ ವಾಸಿ ನಿವೃತ್ತ ರೇಷ್ಮೆ ಇಲಾಖೆ ಅಧಿಕಾರಿ ಕೆ. ಪರಮೇಶ್ವರಪ್ಪನವರ ಧರ್ಮಪತ್ನಿ ಹೆಚ್.ಎಸ್. ರೇಣುಕಾ (59)ಇವರು ದಿನಾಂಕ 18.08.2023ರ ರಾತ್ರಿ 10.45ಕ್ಕೆ ನಿಧನರಾದರು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.08.2023ರ ಶನಿವಾರ ಮಧ್ಯಾಹ್ನ 2 ಕ್ಕೆ ಮೃತರ ಸ್ವಗ್ರಾಮವಾದ ಚನ್ನಗಿರಿ ತಾಲ್ಲೂಕು ಕರೆಕಟ್ಟೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕೆ.ಎನ್. ಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಮಂಜಮ್ಮ



ಮಲೇಬೆನ್ನೂರು, ಆ. 18- ಕಡಾರನಾಯ್ಕನಹಳ್ಳಿ ಗ್ರಾ.ಪಂ. ನೂತನ ಅಧ್ಯಕ್ಷರಾಗಿ ಶ್ರೀಮತಿ ಮಂಜಮ್ಮ ಶೇಖರಪ್ಪ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷ ಸ್ಥಾನ ಎಸ್ಸಿಗೆ ಮೀಸಲಾಗಿತ್ತು. ಆದರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣೆ ನಡೆಯಲಿಲ್ಲ. ಪಶು ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸಿದ್ದೇಶ್ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಪಿಡಿಓ ಶಿಲ್ಪಾ ಸಹಕರಿಸಿದರು.

ಗ್ರಾ.ಪಂ.ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ವಿ. ಕುಬೇರಪ್ಪ ಅವರ ನೇತೃತ್ವದಲ್ಲಿ ನೂತನ ಅಧ್ಯಕ್ಷರ ಆಯ್ಕೆಯಾಗಿದ್ದು, ಸದಸ್ಯರಾದ ಭರಮಗೌಡ, ಜಿ. ಹೆಚ್. ಬಸವನಗೌಡ, ಹುಸೇನ್‌ಸಾಬ್, ಪರಶುರಾಮ್, ಗಿರಿಜಮ್ಮ, ಕಾಮಾಕ್ಷಿ ಮತ್ತು ಗ್ರಾಮದ ಮುಖಂಡರಾದ ಬಿ. ಬಸವನಗೌಡ, ಜಿ. ಸಣ್ಣಗೌಡ, ಟಿ. ಗಣೇಶಪ್ಪ, ಹೆಚ್. ರೇವಣಸಿದ್ದಪ್ಪ, ಹೆಚ್. ತಿಪ್ಪೇಸ್ವಾಮಿ, ಪ್ರಭುಗೌಡ, ಶಿವರಾಜ್ ಈ ವೇಳೆ ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಮುಖ ತೋರಿಸಿದರೆ ಮಹಿಳೆಯರ ಅಪಮೌಲ್ಯ : ತಾಲಿಬಾನ್

ಕಾಬುಲ್, ಆ. 18 – ಸಾರ್ವಜನಿಕ ಸ್ಥಳಗಳಲ್ಲಿ ಪುರುಷರು ಮಹಿಳೆಯರ ಮುಖ ನೋಡಿದರೆ ಅವರ ಅಪಮೌಲ್ಯವಾಗುತ್ತದೆ ಎಂದು ತಾಲಿಬಾನ್ ಸರ್ಕಾರದ ಪ್ರಮುಖ ಇಲಾಖೆಯ ವಕ್ತಾರರು ಹೇಳಿದ್ದಾರೆ.

ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಮುಖ ತೋರಿಸುವುದು ಪಾಪವಾಗುತ್ತದೆ ಎಂದು ತಾಲಿಬಾನ್ ಗುಣ – ಅವಗುಣಗಳ ಸಚಿವಾಲಯದ ವಕ್ತಾರ ಮೌಲ್ವಿ ಮೊಹಮ್ಮದ್ ಸಾಧಿಕ್ ಆಕಿಫ್ ಹೇಳಿದ್ದಾರೆ.

ಮಹಿಳೆಯರು ಮುಖ ಮುಚ್ಚಿಕೊಂಡಿರಬೇಕು ಎಂಬುದನ್ನು ನಮ್ಮ ವಿದ್ವಾಂಸರೂ ಸಹ ಒಪ್ಪುತ್ತಾರೆ. ಮುಖ ತೋರಿಸುವುದರಿಂದ ಮಹಿಳೆಯ ಮುಖಕ್ಕೇನೂ ಹಾನಿಯಾಗುವುದಿಲ್ಲ. ಮಹಿಳೆಯರು ತಮ್ಮದೇ ಆದ ಮೌಲ್ಯ ಹೊಂದಿರುತ್ತಾರೆ. ಪುರುಷರು ಅವರ ಮುಖ ನೋಡುವುದರಿಂದ ಮಹಿಳೆಯರ ಅಪಮೌಲ್ಯವಾಗುತ್ತದೆ. ಹಿಜಾಬ್‌ನಲ್ಲಿರುವ ಮಹಿಳೆಯರಿಗೆ ದೇವರಿಂದ ಗೌರವ ಸಿಗುತ್ತದೆ. ಇದರಲ್ಲೇ ಮೌಲ್ಯ ಇದೆ ಎಂದವರು ಹೇಳಿದ್ದಾರೆ.

ಆಫ್ಘಾನಿಸ್ತಾನದಲ್ಲಿ ಶರಿಯಾ ಜಾರಿಯಾಗಬೇಕು ಎಂದು ಜನ ಬಯಸಿದ್ದರು. ಈಗ ನಾವು ಶರಿಯಾ ಜಾರಿಗೆ ತರುತ್ತಿದ್ದೇವೆ. ಇಸ್ಲಾಮಿಕ್ ನಿಯಮಗಳಲ್ಲಿ ನಾವು ಹೊಸದಾಗಿ ಏನೂ ಸೇರಿಸಿಲ್ಲ. 1400 ವರ್ಷಗಳಿಂದ ಇರುವ ಶರಿಯಾವನ್ನೇ ಈಗಲೂ ಜಾರಿಗೆ ತರಲಾಗುತ್ತಿದೆ ಎಂದು ಆಕಿಫ್ ಹೇಳಿದ್ದಾರೆ.

ಈಗಿರುವ ಆಡಳಿತದಲ್ಲಿ ಯಾರೂ ಮಹಿಳೆಯರನ್ನು ಪೀಡಿಸುತ್ತಿಲ್ಲ. ಮದ್ಯಪಾನ ಹಾಗೂ ಮಕ್ಕಳ ಲೈಂಗಿಕ ದುರ್ಬಳಕೆಯಂತಹ ಪಿಡುಗುಗಳನ್ನು ನಿವಾರಿಸಿದ್ದೇವೆ ಎಂದೂ ಅವರು ಹೇಳಿದ್ದಾರೆ.

ಮಹಿಳೆಯರು ಕ್ರೀಡೆಗಳಿಗೆ ಹೋಗಬಾರದು, ಪಾರ್ಕುಗಳಿಗೆ ಹೋಗಬಾರದು ಎಂದೇನೂ ನಾವು ಹೇಳುತ್ತಿಲ್ಲ. ಪುರುಷರು ಪಾರ್ಕಿನಲ್ಲಿ ಇಲ್ಲದೇ ಇದ್ದಾಗ ಮಹಿಳೆಯರು ಹೋಗಬಹುದು. ಆದರೆ, ಕೆಲ ಮಹಿಳೆಯರು ಅರೆನಗ್ನವಾಗಿ ಹಾಗೂ ಪುರುಷರ ನಡುವೆ ಹೋಗಬೇಕು ಎಂದು ಬಯಸುತ್ತಾರೆ. ಇದಕ್ಕೆಲ್ಲ ಅವಕಾಶ ಇಲ್ಲ ಎಂದು ಆಕಿಫ್ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ರೇಷ್ಮೆ ಸೀರೆಗಳ ಪ್ರದರ್ಶನ



ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಅಭಿವೃದ್ಧಿ ಸಂಸ್ಥೆ ವತಿಯಿಂದ ಇಂದಿನಿಂದ 27ರವರೆಗೆ 9 ದಿನಗಳ ಕಾಲ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳವು ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್‌ನಲ್ಲಿ ನಡೆಯಲಿದೆ.

ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು 60 ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರತಿ ದಿನ ಬೆಳಿಗ್ಗೆ 10.30 ರಿಂದ ರಾತ್ರಿ 8.30 ರವರೆಗೆ ಪ್ರದರ್ಶಿಸುವರು.

ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ದೇಶದ ಮುಖ್ಯ ನಗರಗಳಲ್ಲಿ ಮಾರಾಟ ಮೇಳವನ್ನು ಆಯೋಜಿಸುವ ಮೂಲಕ ನೇರವಾಗಿ ಅವರ ಉತ್ಪನ್ನಗಳು ಗ್ರಾಹಕರಿಗೆ ತಲುಪಿಸುವಂತೆ ವ್ಯವಸ್ಥೆ ಮಾಡುವುದು ಮತ್ತು ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇಕಾರರೇ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಲಾಭವನ್ನು ಹೆಚ್ಚು ಗಳಿಸುವಂತೆ ಮಾಡುವ ಉದ್ದೇಶವನ್ನು ಅಭಿವೃದ್ಧಿ ಸಂಸ್ಥೆಯು ಹೊಂದಿದೆ.

ಮೇಳದಲ್ಲಿ ತಸ್ಸರ್‌ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಮತ್ತಿತರೆ ಸೀರೆಗಳು ಲಭ್ಯವಿರುತ್ತವೆ.

## ತಾಲಿಬಾನ್‌ನ ಆಫ್ಘಾನ್ ಮೇಲೆ ಹಾರಲು ಮುಂದಾಗುವವರು ಯಾರು?

ದುಬೈ, ಆ. 18 - ಆಫ್ಘಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ನಂತರ, ಆ ದೇಶದ ಮೇಲೆ ವಿಮಾನ ಹಾರುವುದನ್ನು ನಿಷೇಧಿಸಲಾಗಿತ್ತು. ಭಾರತ ಸೇರಿದಂತೆ, ಹಲವು ದೇಶಗಳಿಗೆ ಬರುವ ವಿಮಾನಗಳು ಸುತ್ತಿ ಬಳಸಿ ಬರಬೇಕಾಯಿತು.

ಈಗ ತಾಲಿಬಾನ್ ನಿಷೇಧ ವಾಪಸ್ ಪಡೆದಿದ್ದು, ವಿಮಾನ ಹಾರಬಹುದು ಎಂದು ಹೇಳಿದೆ. ಆದರೆ, ಯಾವುದೇ ವಾಣಿಜ್ಯ ವಿಮಾನ ಈ ವಲಯದ ಮೇಲೆ ಹಾರುವ ಧೈರ್ಯ ತೋರುತ್ತಿಲ್ಲ. ಏಕೆಂದರೆ ವಿಮಾನದ 'ಮೈಲೇಜ್'ಗಿಂತ, ಜೀವದ 'ಮೈಲೇಜ್' ಮುಖ್ಯ ಎಂದು ವಿಮಾನಯಾನ ಸಂಸ್ಥೆಗಳು ನಿರ್ಧರಿಸಿವೆ.

ಆಫ್ಘಾನಿಸ್ತಾನ ನೆಲದಿಂದ ಸುತ್ತುವರಿದ ದೇಶವಾಗಿದೆ. ಹೀಗಾಗಿ ಯುರೋಪ್ ಹಾಗೂ ಅಮೆರಿಕಗೆ ಭಾರತದಿಂದ ತೆರಳಲು ಆಫ್ಘಾನಿಸ್ತಾನದ ಮೇಲೆ ಹೋಗುವುದು ನೇರ ದಾರಿಯಾಗಿದೆ. ಈ ಮಾರ್ಗದಲ್ಲಿ ಹೋದರೆ ಇಂಧನ ವೆಚ್ಚ ಕಡಿಮೆಯಾಗುತ್ತದೆ.

ಆದರೆ, 2021ರ ಆಗಸ್ಟ್ 15ರಂದು ಕಾಬೂಲ್ ಅನ್ನು ತಾಲಿಬಾನ್ ವಶಪಡಿಸಿಕೊಂಡ ನಂತರ ಆ ದೇಶಕ್ಕೆ ನಾಗರಿಕ ವಿಮಾನಗಳು ತೆರಳುತ್ತಿಲ್ಲ. ಅಲ್ಲಿ ವೈಮಾನಿಕ ನಿಯಂತ್ರಣ ಕೇಂದ್ರವೂ ಉಳಿದಿಲ್ಲ. ನಾಗರಿಕ ವಿಮಾನಗಳು ಇರಾನ್ ಹಾಗೂ ಪಾಕಿಸ್ತಾನವನ್ನು ಸುತ್ತಿಕೊಂಡು ಹೋಗುತ್ತಿವೆ. ಕೆಲ ವಿಮಾನಗಳು ಆಫ್ಘಾನಿಸ್ತಾನದ ಮೇಲೆ ಹೋಗುವ ಪರಿಸ್ಥಿತಿ ಬಂದರೂ, ಜನವಿರಳವಾಗಿರುವ ವಾಖಾನ್ ಕಾರಿಡಾರ್ ಮೂಲಕ ಕೆಲವೇ ನಿಮಿಷಗಳಲ್ಲಿ ಸಾಗುತ್ತಿವೆ. ಈ ಪ್ರದೇಶವು ತಜಿಕಿಸ್ತಾನ ಹಾಗೂ ಪಾಕಿಸ್ತಾನದ ನಡುವೆ ಇದೆ.

ಕಳೆದ ಜುಲೈನಲ್ಲಿ ಅಮೆರಿಕದ

### 'ಮೈಲೇಜ್' ಬಯಸದ ವಿಮಾನಯಾನ ಸಂಸ್ಥೆಗಳು

ವೈಮಾನಿಕ ಆಡಳಿತವು ಹೇಳಿಕೆಯೊಂದನ್ನು ನೀಡಿ, ಆಫ್ಘಾನಿಸ್ತಾನದ ವೈಮಾನಿಕ ಮಾರ್ಗದಲ್ಲಿ 32 ಸಾವಿರ ಅಡಿ ಎತ್ತರದಲ್ಲಿ ಹಾರಬಹುದು ಎಂದು ಹೇಳಿತ್ತು.

ತಾಲಿಬಾನ್ ಅಧಿಕಾರ ವಶಪಡಿಸಿಕೊಳ್ಳುವ ಮುಂಚೆ, ಆಫ್ಘಾನಿಸ್ತಾನದ ಮೇಲೆ ಪ್ರತಿ ವರ್ಷ ಲಕ್ಷದಷ್ಟು ವಿಮಾನಗಳು ಹಾದು ಹೋಗುತ್ತಿದ್ದವು. ಪ್ರತಿ ವಿಮಾನ ಹಾರಾಟಕ್ಕೂ 700 ಡಾಲರ್ ಶುಲ್ಕ ವಿಧಿಸಲಾಗುತ್ತಿತ್ತು. ಆರ್ಥಿಕ ಸಂಕಷ್ಟದಲ್ಲಿರುವ ಆಫ್ಘಾನಿಸ್ತಾನಕ್ಕೆ ಇದು ದೊಡ್ಡ ಮೊತ್ತವೇ ಆಗಿದೆ.

ಆದರೆ, ಆಫ್ಘಾನಿಸ್ತಾನದ ಮೇಲೆ ಹಾದು ಹೋಗಲು ಅಡ್ಡಿಗಳಿವೆ. ಆ ದೇಶದಲ್ಲಿ ನಿಯಂತ್ರಣವಿಲ್ಲದ 4,500 ವಿಮಾನ ವಿರೋಧಿ ಲಾಂಚರ್‌ಗಳಿವೆ. ಸೋವಿಯತ್ ಕಾಲದ ಹಲವಾರು ವಿಮಾನ ವಿರೋಧಿ ಲಾಂಚರ್‌ಗಳು ಆಫ್ಘಾನಿಸ್ತಾನದಲ್ಲಿವೆ. ಕೆಳ ಹಂತದಲ್ಲಿ ಹಾರುವ ವಿಮಾನಗಳಿಗೆ ಯಾವುದೇ ಭದ್ರತೆ ಇಲ್ಲ. ಈ ಹಿಂದೆ 2014ರಲ್ಲಿ ಮಲೇಷಿಯಾದ ವಿಮಾನವನ್ನು ಉಕ್ರೇನ್‌ನಲ್ಲಿ ಹೊಡೆದುರುಳಿಸಿದ ಘಟನೆ ವಿಮಾನಯಾನ ಸಂಸ್ಥೆಗಳಿಗೆ ಕರಾಳ ಸ್ವಪ್ನವಾಗಿದೆ.

ಅಲ್ಲದೇ ಆಫ್ಘಾನ್ ಮೇಲೆ ಹಾದುವ ಹೋಗುವ ವಿಮಾನಗಳಿಗೆ ಸಮಸ್ಯೆಯಾದರೆ, ನೆರವು ಪಡೆಯಲು ವೈಮಾನಿಕ ನಿಯಂತ್ರಣ ಕೇಂದ್ರಗಳೂ ಇಲ್ಲ.

ಹೀಗಾಗಿಯೇ ಯಾವುದೇ ವಿಮಾನಗಳು ಮೈಲೇಜ್ ಆಸೆಗಾಗಿ ಆಫ್ಘಾನಿಸ್ತಾನದ ವೈಮಾನಿಕ ಪ್ರದೇಶ ಬಳಸಲು ಬಯಸುತ್ತಿಲ್ಲ. ಇಷ್ಟಾದರೂ, ತನ್ನ ವೈಮಾನಿಕ ಪ್ರದೇಶವನ್ನು ಬಳಸಿಕೊಳ್ಳಲು ಅವಕಾಶ ನೀಡಿ ನಾಲ್ಕು ತಿಂಗಳಲ್ಲೇ 8.4 ದಶಲಕ್ಷ ಡಾಲರ್ ಹಣ ಪಡೆದಿರುವುದಾಗಿ ತಾಲಿಬಾನ್ ಹೇಳಿಕೊಳ್ಳುತ್ತಿದೆ. ಅಂತರರಾಷ್ಟ್ರೀಯ ವಿಮಾನ ಸಾರಿಗೆ ಒಕ್ಕೂಟದಿಂದ ಹಣ ಪಡೆದಿರುವುದಾಗಿ ತಾಲಿಬಾನ್ ಹೇಳಿದೆ. ಆದರೆ, 2021ರ ಸೆಪ್ಟೆಂಬರ್‌ನಿಂದಲೂ ಆಫ್ಘಾನಿಸ್ತಾನಕ್ಕೆ ಹಣ ಪಾವತಿಸಲು ಯಾವುದೇ ಒಪ್ಪಂದ ಹೊಂದಿಲ್ಲ. ಹೀಗಾಗಿ ಅಲ್ಲಿಂದ ಹಣ ಪಾವತಿಸಿಲ್ಲ ಎಂದು ಒಕ್ಕೂಟ ಸ್ಪಷ್ಟಪಡಿಸಿದೆ.

## ಶಿಕ್ಷಣ ಇಲಾಖೆಯಲ್ಲಿ ವಚನ ಸಾಹಿತ್ಯದ ಅವಗಣನೆ



ಸಾಣೇಹಳ್ಳಿ, ಆ. 18- ಶಿಕ್ಷಣ ಇಲಾಖೆಯು ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಲ್ಲಿರುವ ಪ್ರತಿಭೆ ಹೊರಹಾಕಲು ಪ್ರತಿವರ್ಷ 'ಪ್ರತಿಭಾ ಕಾರಂಜಿ' ನಡೆಸುತ್ತಿರುವುದು ಸ್ವಾಗತಾರ್ಹ. ಆದರೆ ಇದರಲ್ಲಿ ಲಘುಸಂಗೀತ ವಿಭಾಗದಿಂದ ವಚನಕಾರರ ವಚನ ಸಾಹಿತ್ಯ ಮತ್ತು ಹರಿದಾಸರ ದಾಸ ಸಾಹಿತ್ಯವನ್ನು ಹಾಡದಂತೆ ನಿರ್ಬಂಧ ವಿಧಿಸಿರುವುದು ಆಶ್ಚರ್ಯಕರ. ಇದು ವಚನಕಾರರಿಗೆ ಮತ್ತು ದಾಸವರೇಣ್ಯರಿಗೆ ಮಾಡಿರುವ ಅವಮಾನವೇ ಸರಿ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ ಲಘುಸಂಗೀತಕ್ಕೆ ಹೇಳಿ ಮಾಡಿಸಿದ ರೀತಿಯಲ್ಲಿ ಇವೆ ಎನ್ನುವುದಕ್ಕೆ ಅವು ಜನಪ್ರಿಯವಾಗಿರುವುದೇ ಸಾಕ್ಷಿ. ಆದಾಗ್ಯೂ ಸರ್ಕಾರ ಇದನ್ನು ಪರಿಗಣಿಸದೇ ಉಭಯ ಸಾಹಿತ್ಯವನ್ನು ಕಡೆಗಣಿಸಿರುವುದು ಕನ್ನಡದ ಆತ್ಮವನ್ನೇ ಅವಮಾನಿಸಿದಂತಾಗುತ್ತದೆ.

ಈ ನಿಯಮ ಕಳೆದ ಏಳೆಂಟು ವರ್ಷಗಳಿಂದಲೂ ಜಾರಿಯಲ್ಲಿದೆಯಂತೆ. ನಮಗೆ ಕಳೆದ ಎರಡು ದಿನಗಳ ಹಿಂದೆ ಅಧ್ಯಾಪಕರೊಬ್ಬರಿಂದ ಈ ವಿಷಯ ತಿಳಿಯಿತು. ಸಂಬಂಧಪಟ್ಟ ಆದೇಶದ ಪ್ರತಿಯನ್ನು ತರಿಸಿ ಕೊಂಡು ನೋಡಿದಾಗ ಆಶ್ಚರ್ಯವಾಯಿತು. ಇದುವರೆಗೂ ಯಾರೊಬ್ಬರೂ ಇದನ್ನು ಪ್ರಶ್ನಿಸದಿರುವುದು ವಿಷಾದನೀಯ. ಇದೊಂದು ವ್ಯವಸ್ಥಿತ ಪಿತೂರಿಯಂತೆ ತೋರುತ್ತಿದೆ ಎಂದವರು ಅಭಿಪ್ರಾಯಿಸಿದ್ದಾರೆ.

ಎಲ್ಲಾ ಶಾಲೆಗಳಲ್ಲೂ ಅಗತ್ಯ ಪ್ರಮಾಣದಲ್ಲಿ ಸಂಸ್ಕೃತ, ಉರ್ದು ಶಿಕ್ಷಕರಿಲ್ಲದಿದ್ದರೂ ಧಾರ್ಮಿಕ ವಿಭಾಗದಲ್ಲಿ ಭಗವದ್ಗೀತೆ, ಕುರಾನ್ ಪಠಣಕ್ಕೆ ಅವಕಾಶವನ್ನು ನೀಡಿರುವಾಗ, ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿರುವಾಗ ಕನ್ನಡದ ವಚನಗಳಿಗೆ, ದಾಸ ಸಾಹಿತ್ಯಕ್ಕೆ ಏಕೆ ಅವಕಾಶ ನೀಡಿಲ್ಲ ಎನ್ನುವುದು ಪ್ರಶ್ನಾರ್ಹವಾಗಿದೆ. ಪ್ರತ್ಯೇಕ ವಿಭಾಗದ ಅಡಿಯಲ್ಲಿ ವಚನ ಸಾಹಿತ್ಯ ಮತ್ತು ದಾಸಸಾಹಿತ್ಯಕ್ಕೂ ಅವಕಾಶ ನೀಡಿದರೆ ಮಕ್ಕಳ ಮನೋ ಭೂಮಿಕೆಯಲ್ಲಿ ಸತ್ವಯುತ, ವೈಚಾರಿಕ, ವೈಜ್ಞಾನಿಕ ಬೀಜ ಬಿತ್ತಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಶಿಕ್ಷಣ ಸಚಿವರು, ಅಧಿಕಾರಿಗಳು ಕೂಡಲೇ ಎಚ್ಚೆತ್ತು ಆಗಿರುವ ದೋಷಗಳನ್ನು ಸರಿಪಡಿಸಬೇಕೆಂದು ಸ್ವಾಮೀಜಿ ಆಗ್ರಹಿಸಿದ್ದಾರೆ.

## ಉಕ್ಕಡಗಾತ್ರಿ ಗ್ರಾ.ಪಂ. ಅಧ್ಯಕ್ಷರಾಗಿ ಭಾರತಿ ಉಪಾಧ್ಯಕ್ಷರಾಗಿ ಗೋವಿನಹಾಳ್ ಪ್ರಕಾಶ್



ಮಲೇಬೆನ್ನೂರು, ಆ. 18- ಉಕ್ಕಡಗಾತ್ರಿ ಗ್ರಾ.ಪಂ. ಅಧ್ಯಕ್ಷರಾಗಿ ಶ್ರೀಮತಿ ಭಾರತಿ ಕಟಿಗೇರ ಸಿದ್ದೇಶ್ ಮತ್ತು ಉಪಾಧ್ಯಕ್ಷರಾಗಿ ಗೋವಿನಹಾಳ್ ದಡ್ಡಿ ಪ್ರಕಾಶ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನ ಎಸ್ಟಿ ಮತ್ತು ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ರಾಮಕೃಷ್ಣ ಅವರು ಚುನಾವಣಾಧಿಕಾರಿಯಾಗಿದ್ದರು. ಪಿಡಿಓ ಟಿಪಿ ರಾಮಚಂದ್ರಪ್ಪ ಮತ್ತು ಇತರರು ಉಪಸ್ಥಿತರಿದ್ದರು.

## ದೇವಾಲಯದಂತೆ ಗ್ರಂಥಾಲಯವೂ ಸ್ಥಾಪನೆಯಾಗಬೇಕು : ಷಡಕ್ಷರಮುನಿ ಶ್ರೀ

ಹರಿಹರ, ಆ. 18 - ದೇವಾಲಯದ ನಿರ್ಮಾಣಕ್ಕೆ ಆಸಕ್ತಿ ತೋರಿಸಿದಂತೆ, ತಮ್ಮ ಗ್ರಾಮಗಳಲ್ಲಿ ಗ್ರಂಥಾಲಯ ಸ್ಥಾಪಿಸಲು ಮುಂದಾಗಬೇಕು ಎಂದು ಹಿರಿಯೂರಿನ ಆದಿಜಾಂಬವ ಕೋಡಿಹಳ್ಳಿ ಬೃಹನ್ಮಠದ ಶ್ರೀ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಹೊರವಲಯದ ಕೊಂಡಜ್ಜಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ದುರ್ಗಾಂಬಿಕ ದೇವಿ ದೇವಸ್ಥಾನದ ಲೋಕಾರ್ಪಣೆ, ಕಾಷ್ಠ ನಿರ್ಮಿತ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಶಾರೋಹಣ ಕಾರ್ಯಕ್ರಮದ ಪ್ರಯುಕ್ತ ಏರ್ಪಡಿಸಿದ್ದ ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ, ಶ್ರೀಗಳು ಮಾತನಾಡಿದರು.




ವಿದ್ಯೆ ಮತ್ತು ಜ್ಞಾನದ ಬಲದಿಂದ ಮಾತ್ರ ಬದುಕು ಕಟ್ಟಿಕೊಳ್ಳಬಹುದು. ಭಾವನೆಗಳು ನಮ್ಮ ಬದುಕಿನಲ್ಲಿ ಕೆಲ ಸಂದರ್ಭಕ್ಕೆ ಮಾತ್ರ ಇರಬೇಕು ಎಂದು ಶ್ರೀಗಳು ಅಭಿಪ್ರಾಯ ಪಟ್ಟರು.

ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಪರಸ್ಪರ ಪ್ರೀತಿ, ವಿಶ್ವಾಸ, ಶಾಂತಿ, ಸೌಹಾರ್ದ, ಸಾಮರಸ್ಯದಿಂದ ಬದುಕು ನಡೆಸಿದರೆ ನಾವು ನಂಬಿದಂತಹ ದೇವರನ್ನು ಅಲ್ಲೇ ಕಾಣಬಹುದು ಎಂದರು. ಎಲ್ಲರ ಹೃದಯದಲ್ಲೂ ಭಗವಂತ ನೆಲೆಸಿದ್ದಾನೆ. ಅವನನ್ನು ಸಾಕ್ಷಾತ್ಕರಿಸಿಕೊಳ್ಳಲು, ಶ್ರದ್ಧೆ, ಪ್ರಾಮಾಣಿಕತೆಯಿಂದ, ಧಾರ್ಮಿಕ ಮಾರ್ಗದಲ್ಲಿ ಸಾಗಬೇಕೆಂದು ಶ್ರೀಗಳು ತಿಳಿಸಿದರು.

ಸಮಾರಂಭದಲ್ಲಿ ಕೆ.ಬಿ.ಷಣ್ಮುಖಪ್ಪ, ಕೆ.ಜಿ. ಹನುಮಂತಪ್ಪ, ಹಾಲಪ್ಪ, ಗಂಗಾಧರ್, ಅಂಜಿನಪ್ಪ ಮತ್ತಿತರರು ಉಪಸ್ಥಿತರಿದ್ದರು.




# ಕಂದಾಯ ಇಲಾಖೆಯ ಪ್ರಕರಣಗಳ ಇತ್ಯರ್ಥಕ್ಕೆ 4 ತಿಂಗಳ ಗಡುವು



ಬೆಂಗಳೂರು, ಆ. 18 - ತಹಶೀಲ್ದಾರ್, ಉಪವಿಭಾಗಾ ಧಿಕಾರಿ ಹಾಗೂ ಜಿಲ್ಲಾಧಿಕಾರಿ ಮಟ್ಟದ ನ್ಯಾಯಾಲಯಗಳಲ್ಲಿ 6 ತಿಂಗಳಿನಿಂದ 5 ವರ್ಷಗಳವರೆಗೆ ನೂರಾರು ತಕರಾರು ಪ್ರಕರಣಗಳು ಬಾಕಿ ಉಳಿದಿದ್ದು, ಈ ಎಲ್ಲ ಪ್ರಕರಣಗಳನ್ನು 4 ತಿಂಗಳ ಕಾಲಮಿತಿಯಲ್ಲಿ ಇತ್ಯರ್ಥಪಡಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಗಡುವು ನೀಡಿದ್ದಾರೆ.

ವಿಕಾಸಸೌಧದಲ್ಲಿ ಆಯೋಜಿಸಲಾಗಿದ್ದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಐದು ವರ್ಷಗಳಿಂದ ಇತ್ಯರ್ಥವಾಗದ ತಕರಾರು ಪ್ರಕರಣಗಳನ್ನು ಶೀಘ್ರದಲ್ಲೇ ವಿಲೇವಾರಿಗೊಳಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳ ಪೈಕಿ ದೊಡ್ಡ ಬಳ್ಳಾಪುರ 5683, ಬೆಂಗಳೂರು ದಕ್ಷಿಣ 6129, ಬೆಂಗಳೂರು ಉತ್ತರ 6035, ಚಿಕ್ಕಬಳ್ಳಾಪುರ 3014, ಚಿತ್ರದುರ್ಗ 1374, ದಾವಣಗೆರೆ 152, ಹೊನ್ನಾಳಿ, 456, ಕೋಲಾರ 5112, ರಾಮಮನಗರ 4210, ಶಿವಮೊಗ್ಗ 613, ಸಾಗರ 411, ತುಮಕೂರು 7354, ಮಧುಗಿರಿ 3167 ಮತ್ತು ತಿಪಟೂರಿನ 742 ಪ್ರಕರಣಗಳು ಸೇರಿದಂತೆ ಒಟ್ಟಾರೆಯಾಗಿ 45,482 ಪ್ರಕರಣಗಳು ಬಾಕಿ ಇವೆ.

ಜಿಲ್ಲಾಧಿಕಾರಿ ನ್ಯಾಯಾಲಯಗಳ ಪೈಕಿ ಬೆಂಗಳೂರು ಗ್ರಾಮಾಂತರ 1384, ಬೆಂಗಳೂರು ನಗರ 4974, ಚಿಕ್ಕಬಳ್ಳಾಪುರ 429, ಚಿತ್ರದುರ್ಗ 1711, ದಾವಣಗೆರೆ 81, ಕೋಲಾರ 102, ರಾಮನಗರ 501, ಶಿವಮೊಗ್ಗ 73, ತುಮಕೂರಿನ 697 ಸೇರಿದಂತೆ ಒಟ್ಟಾರೆಯಾಗಿ 10,065 ಪ್ರಕರಣಗಳು ಬಾಕಿ ಇವೆ ಎಂದು ಸಚಿವರು ಹೇಳಿದರು.

ಉನ್ನತ ಅಧಿಕಾರಿಗಳೇ ತಮ್ಮ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸದಿದ್ದರೆ, ತಹಶೀಲ್ದಾರರಿಂದ ನೀವು ಹೇಗೆ ಪರಿಣಾಮಕಾರಿ ಕೆಲಸವನ್ನು ನಿರೀಕ್ಷೆ ಮಾಡಲು ಸಾಧ್ಯ. ಹೀಗಾಗಿ ನೀವು ಇತರರಿಗೆ ತಪ್ಪು ಉದಾಹರಣೆಯಾಗಬೇಡಿ ಎಂದು ಎಚ್ಚರಿಸಿದರು.

ಸೆಪ್ಟೆಂಬರ್ 10ನೇ ತಾರೀಖಿನ ಒಳಗಾಗಿ ಮತ್ತೊಂದು ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ತಹಶೀಲ್ದಾರ್, ಎ.ಸಿ.-ಡಿ.ಸಿ. ನ್ಯಾಯಾಲಯಗಳಲ್ಲಿ ವಿಲೇವಾರಿಯಾಗಿರುವ ಪ್ರಕರಣಗಳ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

## ಚೀಟಿ ನಿಧಿಗಳ ದಿನಾಚರಣೆ : ನಗರದಲ್ಲಿಂದು ಬೈಕ್ ರ್‍ಯಾಲಿ

ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘದ ವತಿಯಿಂದ ಚೀಟಿ ನಿಧಿಗಳ ದಿನಾಚರಣೆ ಪ್ರಯುಕ್ತ ಇಂದು ಬೈಕ್ ರ್‍ಯಾಲಿ ನಡೆಯಲಿದೆ.

ಬೆಳಿಗ್ಗೆ 10.30ಕ್ಕೆ ವಿದ್ಯಾನಗರದ ಸಹಾಯಕ ನಿಬಂಧಕರ ಕಛೇರಿಯಿಂದ ಜಿಲ್ಲೆಯ ಎಲ್ಲಾ ಚೀಟಿ ಸಂಸ್ಥೆಗಳ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಂದ ಸಾರ್ವಜನಿಕ ಜಾಗೃತಿಯ ಪೋಸ್ಟರ್‌ಗಳ ಪ್ರದರ್ಶನದೊಂದಿಗೆ 100 ಬೈಕ್‌ಗಳಲ್ಲಿ 180ಕ್ಕೂ ಹೆಚ್ಚು ಸವಾರರಿಂದ ಬೃಹತ್ ಬೈಕ್ ರ್‍ಯಾಲಿಯು ಜಿಲ್ಲಾ ಕಛೇರಿಗಳ ಸಂಕೀರ್ಣದಲ್ಲಿರುವ ಉಪ ನಿಬಂಧಕರ ಕಛೇರಿವರೆಗೆ ಸಂಚರಿಸಿ ಚೀಟಿ ಉದ್ದಿಮೆದಾರರ ಬೇಡಿಕೆಗಳ ಮನವಿಯನ್ನು ಉಪ ನಿಬಂಧಕರಿಗೆ ಸಲ್ಲಿಸಲಾಗುವುದು ಎಂದು ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘದ ಕಾರ್ಯದರ್ಶಿ ಅಂದನೂರು ರಾಜೇಶ್ ತಿಳಿಸಿದ್ದಾರೆ.

ರ್‍ಯಾಲಿಯು ವಿದ್ಯಾನಗರ ಮುಖ್ಯರಸ್ತೆ ಮಾರ್ಗವಾಗಿ ಹದಡಿ ರಸ್ತೆಯ ಐಟಿಐ ಗೇಟ್ ಸಿಗ್ನಲ್, ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನ, ಹದಡಿ ರಸ್ತೆಯ ಮಾರ್ಗವಾಗಿ ಜಯದೇವ ಸರ್ಕಲ್, ಲಾಯರ್ ರಸ್ತೆ, ಹೊಸ ಬಸ್ ನಿಲ್ದಾಣ, ಪಿ.ಬಿ. ರಸ್ತೆ ಮಾರ್ಗವಾಗಿ ರೇಣುಕಾ ಮಂದಿರ, ಎವಿಕೆ ಕಾಲೇಜು ರಸ್ತೆ, ರಾಂ ಅಂಡ್ ಕೋ ಸರ್ಕಲ್, ಗುಂಡಿ ಸರ್ಕಲ್, ಲಕ್ಷ್ಮಿ ಫ್ಲೋರ್‌ಮಿಲ್, ಕುಂದುವಾಡ ಕೆರೆ ರಸ್ತೆ ಮತ್ತು ರಿಂಗ್ ರೋಡ್ ಮಾರ್ಗವಾಗಿ ಸಂಗೊಳ್ಳಿ ರಾಯಣ್ಣ ಸರ್ಕಲ್‌ನಿಂದ ಜಿಲ್ಲಾಡಳಿತ ಕಛೇರಿಗಳ ಸಂಕೀರ್ಣದಲ್ಲಿರುವ ಚೀಟಿ ನಿಧಿ ಉಪನಿಬಂಧಕರ ಕಛೇರಿಗೆ ತಲುಪಲಿದೆ.

# ಆ ದಿನಗಳ ಕ್ಯಾಮರಾಗಳನ್ನು ನೋಡ ಬನ್ನಿ...



### ಇತಿಹಾಸ ಸೇರಿದ ಕ್ಯಾಮರಾಗಳನ್ನು ಕಾಣಲೊಂದು ಅವಕಾಶ

ದಾವಣಗೆರೆ, ಆ. 18 - ಯಶಿಕಾ, ಲಿಬರ್ಟಿ, ಬೋನಿ, ರೂಲಿಫ್ಲೆಕ್ಸ್, ಫ್ಲೆಡ್, ಟರಾಪಿನ್, ಕೊಶಿನಾ, ಜಿನಿತ್, ಪೆಂಟ್ಯಾಕ್ಸ್, ಫ್ಯೂಜಿಕಾ, ಕ್ಲಿಕ್... ಇವೆಲ್ಲ ಏನು ಗೊತ್ತೇ?

ಹಿಂದಾನೊಂದು ಕಾಲದಲ್ಲಿ ಛಾಯಾಗ್ರಾಹಕರ ಒಡನಾಡಿಗಳಾಗಿದ್ದ ಕ್ಯಾಮರಾಗಳ ಹೆಸರುಗಳು. ಬದಲಾದ ಕಾಲದ ಹೊಡೆತಕ್ಕೆ ಸಿಲುಕಿ ಇವುಗಳೆಲ್ಲ ಕಣ್ಮರೆಯಾಗಿವೆ. 1 ಕಾಲದಲ್ಲಿ ಇವು ಜನರನ್ನು 'ಸೆರೆ' ಹಿಡಿದಿದ್ದವು. ಇವುಗಳನ್ನು ಈಗ ನಿಮ್ಮ ಕಣ್ಣಲ್ಲಿ 'ಸೆರೆ' ಹಿಡಿಯಲು ಫೋಟೋಗ್ರಾಫರ್ ಯೂತ್ ವೆಲ್ಫೇರ್ ಅಸೋಸಿಯೇಷನ್ ಅವಕಾಶ ಕಲ್ಪಿಸಿದೆ.

184ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ನಗರದ ಗುರುಭವನದಲ್ಲಿ ಆಗಸ್ಟ್ 18 ಹಾಗೂ 19ರಂದು ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ ನೂರು ವರ್ಷಗಳ ಹಳೆಯ ಕ್ಯಾಮರಾಗಳು ಹಾಗೂ ಛಾಯಾಗ್ರಹಣ ಪರಿಕರಗಳ ಪ್ರದರ್ಶನ ಆಯೋಜಿಸಲಾಗಿದೆ.

ಮಹಾತ್ಮ ಗಾಂಧೀಜಿ ದಾವಣಗೆರೆಗೆ ಬಂದ ಸಂದರ್ಭದಲ್ಲಿ ಚಿತ್ರ ತೆಗೆಯಲು ಬಳಸಿದ್ದ ಕ್ಯಾಮರಾ ಸಹ ಪ್ರದರ್ಶನದಲ್ಲಿದೆ. ಅವಿಭಜಿತ ಚಿತ್ರದುರ್ಗ - ದಾವಣಗೆರೆ ಜಿಲ್ಲೆಯ ಪ್ರಥಮ ಛಾಯಾಗ್ರಾಹಕ ಎಂಬ ಹೆಗ್ಗಳಿಕೆ ಹೊಂದಿರುವ ದಿ. ಹೆಚ್. ಭುಜಂಗರಾಯ ಶಾಸ್ತ್ರಿ ಅವರು ಈ ಚಿತ್ರ ತೆಗೆದಿದ್ದಾರೆ.

ಆ ಕಾಲದ ಭಾರೀ ಗಾತ್ರದ ಕ್ಯಾಮರಾದಲ್ಲಿ ವೇಗದ ನಡಿಗೆಯ ಗಾಂಧೀಜಿ ಭಾವಚಿತ್ರ ತೆಗೆಯು ವುದು ಸಾಹಸವೇ ಆಗಿತ್ತು. ಸಹಾಯಕ ಸೈಕಲ್ ಓಡಿಸುತ್ತಿದ್ದರೆ, ಭುಜಂಗರಾಯರು ಸೈಕಲ್ ಕ್ಯಾರಿ ಯರ್ ಮೇಲೆ ಕುಳಿತು ಗಜಗಾತ್ರದ ಕ್ಯಾಮರಾದಲ್ಲಿ ಗಾಂಧೀಜಿ ಚಿತ್ರ ತೆಗೆದಿದ್ದರು ಎಂದು ಭುಜಂಗ ರಾಯರ ಪುತ್ರ ಹಾಗೂ ಹಿರಿಯ ಛಾಯಾಗ್ರಾಹಕ ಹೆಚ್.ಬಿ. ಮಂಜುನಾಥ್ ತಿಳಿಸಿದ್ದಾರೆ.

ಆ ಕಾಲದಲ್ಲಿ ಛಾಯಾಚಿತ್ರ ತೆಗೆಯುವವರು ಹಾಗೂ ತೆಗೆಸಿಕೊಳ್ಳುವವರಿಬ್ಬರಿಗೂ 'ತರಬೇತಿ'ಯ ಅಗತ್ಯವಿತ್ತು. 1,200 ವ್ಯಾಟ್ ಸಾಮರ್ಥ್ಯದ ದೈತ್ಯ ಬಲ್ಬುಗಳನ್ನು ಹಾಕಿ ಚಿತ್ರ ತೆಗೆಯಬೇಕಿತ್ತು. ಈ ಪ್ರಮಾಣದ ಬೆಳಕು ಕೆಲವರಿಗೆ ಬಳಲಿಕೆ ತರುತ್ತಿತ್ತು ಎಂದು ಹಿರಿಯ ಛಾಯಾಗ್ರಾಹಕರು ಆ ದಿನಗಳನ್ನು ನೆನಪು ಮಾಡಿಕೊಂಡಿದ್ದಾರೆ.

ವಿಡಿಯೋಗ್ರಫಿಯ 'ಆ ದಿನಗಳು' ನೆನಪಿಸುವ ಉಪಕರಣಗಳನ್ನೂ ಪ್ರದರ್ಶನಕ್ಕೆ ಇಡಲಾಗಿದೆ. ನವ ಪೀಳಿಗೆ ಕಾಣದೇ ಇರುವ ರೋಲ್, ವಿಡಿಯೋ ಕ್ಯಾಸೆಟ್, ಎನ್‌ಲಾರ್ಜರ್ ಇತ್ಯಾದಿಗಳು ಇಲ್ಲಿ ಪ್ರದ ರ್ಶನಕ್ಕಿವೆ. ಛಾಯಾಗ್ರಾಹಕರಾದ ಹೇಮಚಂದ್ರ ಜೈನ್ ಹಾಗೂ ಕೆ.ಎಸ್. ರಾಜಶೇಖರ್ ಅವರ ಚಿತ್ರಗಳನ್ನೂ ಸಹ ಇಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಈ ಬಗ್ಗೆ ಮಾತನಾಡಿರುವ ಅಸೋಸಿಯೇಷನ್ ಅಧ್ಯಕ್ಷ ಶ್ರೀನಾಥ್ ಪಿ. ಅಗಡಿ, 1920 ನೇ ಇಸವಿಯ ಫೀಡ್ ಕ್ಯಾಮೆರಾದಿಂದ ಹಿಡಿದು 10 ವರ್ಷಗಳಿಗೂ ಹಿಂದಿನ 120 ಕ್ಯಾಮರಾಗಳು ಇಲ್ಲಿವೆ. ಒಂದೇ ರೀತಿಯ ಕ್ಯಾಮರಾ ಪುನರಾವರ್ತನೆಯಾಗದಂತೆ ನೋಡಿಕೊಳ್ಳಲಾಗಿದೆ ಎಂದರು.

### ಸ್ಮರಣೀಯ ಕ್ಷಣಗಳ ಸೆರೆ ಹಿಡಿಯುವ ಛಾಯಾಗ್ರಾಹಕರು

ಪ್ರದರ್ಶನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವ ಪ್ರಭು ಸ್ವಾಮೀಜಿ, ನಾವು ಮೊಬೈಲ್‌ನಲ್ಲೇ ಚಿತ್ರಗಳನ್ನು ತೆಗೆಯಬಹುದು. ಆದರೆ, ಛಾಯಾಗ್ರಾಹಕರು ತಮ್ಮ ಕಲೆಗಾರಿಕೆಯನ್ನು ಬಳಸಿ, ಕ್ಯಾಮರಾದಲ್ಲಿ ತೆಗೆಯುವ ಚಿತ್ರದ ಸೌಂದರ್ಯವೇ ಬೇರೆ ಎಂದರು.

ಛಾಯಾಗ್ರಾಹಕರು ತಮ್ಮ ಕೌಶಲ್ಯದಿಂದ ಜೀವನದ ಸ್ಮರಣೀಯ ಕ್ಷಣಗಳನ್ನು ಸೆರೆ ಹಿಡಿದು ಸಂಭ್ರಮ - ಸಂತೋಷ ತರುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಎಸ್.ಎಸ್. ಕೇರ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಫೋಟೋಗ್ರಾಫರ್ ಯೂತ್ ವೆಲ್ಫೇರ್ ಅಸೋಸಿಯೇಷನ್ ಅಧ್ಯಕ್ಷ ಶ್ರೀನಾಥ್ ಪಿ. ಅಗಡಿ, ಒಕ್ಕೂಟದ ಪದಾಧಿಕಾರಿಗಳಾದ ವಿಜಯ್ ಜಾಧವ್, ಅಸೋಸಿಯೇಷನ್‌ನ ತಿಪ್ಪೇಸ್ವಾಮಿ, ದುಗ್ಗಪ್ಪ, ಕಿರಣ್ ಕುಮಾರ್, ಮಿಥುನ್, ಮಲ್ಲಿಕಾರ್ಜುನ್, ಬಸವರಾಜು, ಕಿರಣ್ ಕುಮಾರ್, ಅರುಣ್ ಕುಮಾರ್, ಶಂಭು, ವಿಜಯ್ ಕುಮಾರ್, ಹೆಚ್.ಕೆ.ಸಿ. ರಾಜು, ಮಹಾಂತೇಶ್ ಮತ್ತಿತರರು ಉಪಸ್ಥಿತರಿದ್ದರು

### ವಿದೇಶಿ ಉತ್ಪಾದನೆ, ಸ್ವದೇಶಿ ಜೋಡಣೆ

1920ರ ದಶಕದಲ್ಲಿ ಉತ್ಪಾದನೆಯಾದ ಫೀಲ್ಡ್ ಕ್ಯಾಮರಾವನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇದನ್ನು ಬೆಳಗಾವಿಯ ವಿಜಯ್ ಕಂಪನಿ ಉತ್ಪಾದಿಸಿರುವುದು ಎಂಬ ಮೊಹರು ಇದೆ.

ಈ ಹಿನ್ನೆಲೆ ವಿವರಿಸಿದ ಹಿರಿಯ ಛಾಯಾ ಗ್ರಾಹಕ ಹೆಚ್.ಬಿ. ಮಂಜುನಾಥ್, ಸ್ವಾತಂತ್ರ್ಯ ಪೂರ್ವದಲ್ಲಿ ಸ್ವದೇಶಿ ಅಭಿಯಾನ ಬಿರುಸು ಪಡೆದುಕೊಂಡಿತ್ತು. ಹೀಗಾಗಿ ಸಿದ್ಧ ಕ್ಯಾಮರಾ ಗಳನ್ನು ಆಮದು ಮಾಡಿಕೊಳ್ಳಲು ಛಾಯಾಗ್ರಾಹ ಕರು ಹಿಂಜರಿಯುತ್ತಿದ್ದರು. ಬ್ರಿಟನ್ ಹಾಗೂ ಜರ್ಮನಿಗಳಿಂದ ಬಿಡಿ ಭಾಗಗಳನ್ನು ತರಿಸಿ ಕೊಂಡು, ಅದನ್ನು ಬೆಳಗಾವಿಯಲ್ಲಿ ಜೋಡಣೆ ಮಾಡಲಾಗುತ್ತಿತ್ತು. ಹೀಗಾಗಿಯೇ ಈ ಕ್ಯಾಮರಾ ಗಳಲ್ಲಿ ದೇಶಿ ಕಂಪನಿಯ ಹೆಸರಿದೆ ಎಂದರು.

## ನಗರದಲ್ಲಿ ಫೋಟೋ-ವೀಡಿಯೋಗ್ರಾಫರ್ ಸಂಘದ ವಾರ್ಷಿಕೋತ್ಸವ



ದಾವಣಗೆರೆ, ಆ.18- ದಾವಣಗೆರೆ ತಾಲ್ಲೂಕು ಫೋಟೋ ಮತ್ತು ವೀಡಿಯೋಗ್ರಾಫರ್ಸ್ ಸಂಘದ 11ನೇ ವಾರ್ಷಿಕೋತ್ಸವ, 184ನೇ ವಿಶ್ವ ಛಾಯಾಗ್ರಹಣ ದಿನಾಚರಣೆ, ಹಿರಿಯ ಛಾಯಾಗ್ರಾಹಕರಿಗೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ನಾಳೆ ದಿನಾಂಕ 19ರ ಶನಿವಾರ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎಂ. ಮನು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ಬಾಲಭವನದಲ್ಲಿ ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ಛಾಯಾಗ್ರಾಹಕ ಹೆಚ್.ಬಿ. ಮಂಜುನಾಥ್, ಪ್ರತಿಭಾ ಆರ್., ಬಿ.ಮಂಜುನಾಥ್, ಎಸ್.ಎಲ್. ಆನಂದಪ್ಪ, ಖಾಜಾಪೀರ್, ಸುರಭಿ ಶಿವಮೂರ್ತಿ, ಎಸ್.ರಾಜಶೇಖರ್ ಕೊಂಡಜ್ಜಿ, ಮಲ್ಲೇಶ್ ಹೆಚ್. ಪಟೇಲ್ ಆಗಮಿಸಲಿದ್ದಾರೆ. ಇದೇ ವೇಳೆ ಹಿರಿಯ ಛಾಯಾಗ್ರಾಹಕರು ಹಾಗೂ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಚಂದ್ರಶೇಖರ್, ಕೆ.ಮಾಲತೇಶ್ ಜಾಧವ್,

## ನಗರದಲ್ಲಿ ಇಂದು ಜನಪದ ಕಲಾ ಉತ್ಸವ

ದಾವಣಗೆರೆ, ಆ. 18- ಕನ್ನಡ ಮತ್ತ ಸಂಸ್ಕೃತಿ ಇಲಾಖೆ, ಶ್ರೀ ಅನುದಾನಮ್ ಚಾರಿಟೇಬಲ್ ಟ್ರಸ್ಟ್, ನಿಹಾರಿಕ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಭವಾನಿ ಫೌಂಡೇಷನ್ ಗೋಕುಲಹಟ್ಟಿ ಇವರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 19ರ ಶನಿವಾರ ಜನಪದ ಕಲಾ ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಅನುದಾನಮ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಕುಬೇರ ನಾಯ್ಕ ತಿಳಿಸಿದ್ದಾರೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಎಸ್. ಕೇರ್ ಟ್ರಸ್ಟ್‌ನ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕರುಗಳಾದ ಬಸವಂತಪ್ಪ, ಬಿ.ದೇವೇಂದ್ರಪ್ಪ, ಕೃಷ್ಣನಾಯ್ಕ ಸೇರಿದಂತೆ, ಇತರರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ತಿಮ್ಮೇಶ್ ನಾಯ್ಕ, ರಮೇಶ್ ನಾಯ್ಕ, ಬೆಂಡಗೆರೆ ರಾಜಶೇಖರ್, ನಂಜಾನಾಯ್ಕ ಉಪಸ್ಥಿತರಿದ್ದರು.

# ಜಾತಿನಿಂದನೆ ಕಾಯ್ದೆ ದುರ್ಬಳಕೆಗೆ ಖಂಡನೆ

### ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ನಕಲಿ ಹೋರಾಟಗಾರರ ಮೇಲೆ ಕ್ರಮಕ್ಕೆ ದಲಿತ ಯುವಶಕ್ತಿ ವೇದಿಕೆ ಆಗ್ರಹ

ದಾವಣಗೆರೆ, ಆ.18- ರಾಜಕೀಯ ಹಾಗೂ ವೈಯಕ್ತಿಕ ಲಾಭಕ್ಕಾಗಿ ಜಾತಿನಿಂದನೆ ಕಾಯ್ದೆಯನ್ನು ದುರ್ಬಳಕೆ ಮಾಡುಕೊಂಡು, ಸುಳ್ಳು ಪ್ರಕರಣ ದಾಖಲಿಸಿ, ದಲಿತ ಸಮುದಾಯ ತಲೆತಗ್ಗಿಸುವಂತೆ ಮಾಡುವ ವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ದಲಿತ ಯುವಶಕ್ತಿ ವೇದಿಕೆ ಆಗ್ರಹಿಸಿದೆ.

ಪತ್ರಿಕಾಗೋಷ್ಠಿಯಲ್ಲಿಂದು ವೇದಿಕೆಯ ಚೇತನ್ ಕನ್ನಡಿಗ ಮಾತನಾಡುತ್ತಾ, ಅಧ್ಯಕ್ಷ ಮಂಜು, ಇತ್ತೀಚೆಗೆ ನಟ ಉಪೇಂದ್ರ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಂದರ್ಶನದಲ್ಲಿ ಬಳಕೆ ಮಾಡಿರುವ ಪದಕ್ಕೆ ಅಟ್ರಾಸಿಟಿಯ ಮತ್ತೊಂದು ರೂಪ ನೀಡಿ ಪ್ರಕರಣ ದಾಖಲಿಸುತ್ತಿರುವುದು ದಿನದಿಂದ ದಿನಕ್ಕೆ ರಾಜಕೀಯ ತಿರುವು ಪಡೆಯುತ್ತಿದೆ ಎಂದು ಹೇಳಿದರು.

ಈ ರೀತಿ ಕಾಯ್ದೆ ದುರ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಭಯ, ಅಶಾಂತಿ ಸೃಷ್ಟಿಸಲು ಯತ್ನಿಸುವ ನಕಲಿ ಹಾಗೂ ಮುಖವಾಡ ಧಾರಿ ಹೋರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ದಲಿತ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಯ ಮೇಲೆಯೇ ಒಂದು ಕೋಮಿನವರು ದಾಳಿ ಮಾಡಿ ಮನೆಯನ್ನು ಸುಟ್ಟು ಧ್ವಂಸ ಮಾಡಿದಾಗ, ಚಿತ್ರದುರ್ಗದ ಸಂಸದ ನಾರಾಯಣ ಸ್ವಾಮಿ ಅವರಿಗೆ ಹಟ್ಟಿಯೊಳಗೆ ಪ್ರವೇಶ ನೀಡಲಿಲ್ಲ ಎಂಬುದು ಮಾಧ್ಯಮದಲ್ಲಿ ದೊಡ್ಡ ಸುದ್ದಿಯಾದರೂ ನಕಲಿ ದಲಿತ ಹೋರಾಟಗಾರರು ಏಕೆ ಸುಮ್ಮನಿದ್ದರು?

ಇಂದು ತಮ್ಮ ಸಮುದಾಯದ ಜನರಿಗೆ ಅರ್ಥ ಮಾಡಿಸಿ, ತಿದ್ದಬೇಕಾಗಿರುವ ರಾಜಕೀಯ ಮುಖಂಡರು ಹಾಗೂ ಸಚಿವರಾದ ಹೆಚ್.ಸಿ. ಮಹದೇವಪ್ಪ, ಗೃಹ ಸಚಿವ ಜಿ.ಪರಮೇಶ್ವರ್, ಶಾಸಕ ಎನ್. ಮಹೇಶ್, ಪ್ರಿಯಾಂಕ್ ಖರ್ಗೆ ಅವರು ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಪ್ರಯತ್ನ ಮಾಡಬಾರದು ಎಂದು ಹೇಳಿದರು.

ಹೇಮಂತ್ ಮಾತನಾಡಿ, ನಿಜವಾಗಿಯೂ ದೌರ್ಜನ್ಯಗಳಾದರೂ ನಾವು ಖಂಡಿಸಿ, ಹೋರಾಟ ನಡೆಸುತ್ತೇವೆ. ಆದರೆ ಕಾಯ್ದೆ ದುರುಪಯೋಗದ ಪ್ರಕರಣಗಳಿಂದ ಅನ್ಯ ಸಮಾಜದ ಸ್ನೇಹಿತರು ನಮ್ಮಿಂದ ಅಂತರ ಕಾಪಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ಪವನ್ ರೇವಣಕರ್ ಮಾತನಾಡಿ, ಶೇ.40 ರಷ್ಟು ನಕಲಿ ಪ್ರಕರಣಗಳು ದಾಖಲಿಸಲಾಗುತ್ತಿವೆ ಎನ್ನಲಾಗಿದೆ. ಕಾಯ್ದೆ ದುರ್ಬಳಕೆಯಿಂದ ಇಷ್ಟು ವರ್ಷ ಸಮಾಜ ನಮ್ಮ ಮೇಲೆ ಬೆಳೆಸಿಕೊಳ್ಳುತ್ತಿರುವ ಪ್ರೀತಿ ವಿಶ್ವಾಸ ಕ್ಷೀಣಿಸಬಾರದು ಎಂಬುದೇ ನಮ್ಮ ಆಶಯವಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಯುವಶಕ್ತಿ ವೇದಿಕೆ ಅಧ್ಯಕ್ಷ ಮಂಜು, ವೆಂಕಟೇಶ್ ನಾಯ್ಕ ಜಿ., ರಾಹುಲ್ ಆರ್., ನಾಗರಾಜ್ ಸುರ್ವೆ, ರವಿ ಕುಮಾರ್, ಪ್ರಕಾಶ್ ಹೆಚ್.ಸಿ., ಬಿ.ಆರ್. ನರೇಂದ್ರ ಉಪಸ್ಥಿತರಿದ್ದರು.

## ಮಾಹಿತಿ ಹಕ್ಕು ಸವಾಲುಗಳು - ಪರಿಹಾರಗಳು ಕಾರ್ಯಕ್ರಮ

**ನಗರದಲ್ಲಿ ಇಂದು**

ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ ಹಾಗೂ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಡಿಎಎಂಎಸ್) ಇವರ ಸಹಯೋಗದಲ್ಲಿ ಮಾಹಿತಿ ಹಕ್ಕು ಅಧಿನಿಯಮ-2005 ಸವಾಲುಗಳು ಮತ್ತು ಪರಿಹಾರಗಳು ಹಾಗೂ ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಮತ್ತು ಆರ್.ಟಿ.ಇ ಶುಲ್ಕ ಮರುಪಾವತಿ ಸಮಸ್ಯೆಗಳು ಮತ್ತು ಪರಿಹಾರಗಳು ಕುರಿತು ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ನಗರದ ಸೆಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್ ಉದ್ಘಾಟಿಸುವರು. ಟಿ.ಎಂ. ಉಮಾಪತಯ್ಯ ಅಧ್ಯಕ್ಷತೆ ವಹಿಸುವರು. ಸಂಪನ್ಮೂಲ ವ್ಯಕ್ತಿಯಾಗಿ ಎ.ಎಂ.ಪಿ. ವಾಗೀಶ್ ಆಗಮಿಸುವರು. ಮುಖ್ಯ ಅತಿಥಿಗಳಾಗಿ ಜಿ. ಕೊಟ್ರೇಶ್, ಕರಿಸಿದ್ದಪ್ಪ ಎಸ್.ಜಿ., ಶ್ರೀಮತಿ ಗೀತಾ ಎಸ್. ಭಾಗವಹಿಸುವರು. ವಿಶೇಷ ಆಹ್ವಾನಿತರಾಗಿ ಎಸ್.ಜೆ. ಶ್ರೀಧರ್ ಆಗಮಿಸುವರು. ಕಾರ್ಯಕ್ರಮದಲ್ಲಿ ಡಾ. ಪುಷ್ಪಲತಾ, ಹನುಮಂತಪ್ಪ ಎಂ., ನಂಜರಾಜ್ ಎಸ್.ಸಿ., ಎಲ್.ಜಯಪ್ಪ, ಫಸೀಹ್ ಉದ್ದೀನ್ ಶಕೀರ್, ಸುರೇಶ್ ರೆಡ್ಡಿ ಬಿ.ಎನ್. ಹಾಗೂ ಶಾಲಾ ಶಿಕ್ಷಣ ಮತ್ತು ಪದವಿಪೂರ್ವ ಇಲಾಖೆಯ ಎಲ್ಲಾ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಕೆ.ಸಿ. ಲಿಂಗರಾಜ್, ರಾಮಮೂರ್ತಿ ತಿಳಿಸಿದ್ದಾರೆ.

### ರಸ್ತೆ ಸುರಕ್ಷತಾ ಸಮಿತಿ ಸಭೆ

ದಾವಣಗೆರೆ, ಆ. 18- ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 22 ರಂದು ಸಂಜೆ 4.30 ಕ್ಕೆ ಸಭೆ ನಡೆಯಲಿದೆ.

## ಸಕಾಲಕ್ಕೆ ಬೀಜ, ಗೊಬ್ಬರ ವಿತರಿಸಿ: ಮಾಜಿ ಶಾಸಕ ಎಸ್. ವಿ. ರಾಮಚಂದ್ರ



ಹರಪನಹಳ್ಳಿ,ಆ.18- ರೈತರಿಗೆ ಸಮಯಕ್ಕೆ ಸರಿಯಾಗಿ ಬೀಜ, ಗೊಬ್ಬರ ವಿತರಿಸಿ ಎಂದು ಮಾಜಿ ಶಾಸಕ ಎಸ್. ವಿ. ರಾಮಚಂದ್ರಪ್ಪ ಹೇಳಿದರು.

ತಾಲ್ಲೂಕಿನ ಹೊಸಕೋಟೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಗೋದಾಮು ಉದ್ಘಾಟನಾ ಸಮಾರಂಭದ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ರೈತರಿಗೆ ಕಾಲ ಕಾಲಕ್ಕೆ ಸರಿಯಾಗಿ ಬೀಜ, ಗೊಬ್ಬರ ವಿತರಣೆ ಮಾಡಬೇಕು.

ಈ ವರ್ಷ ಮಳೆ ಕಡಿಮೆಯಾಗಿರುವುದರಿಂದ ಬೆಳೆಗಳು ಒಣಗುತ್ತಿವೆ, ರೈತರು ಸಂಕಷ್ಟದಲ್ಲಿದ್ದಾರೆ. ರೈತರ ಪ್ರೀತಿ, ವಿಶ್ವಾಸ ಗಳಿಸಿದರೆ ಇಂತಹ 10 ಗೋದಾಮುಗಳನ್ನು ಕಟ್ಟಿಸಬಹುದು.ಅಧಿಕಾರವಿಲ್ಲದಿದ್ದರೂ ನಿಮ್ಮ ಸೇವೆಗೆ, ಕಷ್ಟ, ಸುಖದಲ್ಲಿ ನಾನು ಸದಾ ಜೊತೆಯಾಗಿರುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ. ಬಿ. ಡಿ. ಸಿ. ಸಿ. ಬ್ಯಾಂಕ್ ನಿರ್ದೇಶಕ ಬಿ. ಕೆ. ಪ್ರಕಾಶ್‌ಎಸ್. ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಾತಪ್ಪ. ಉಪಾಧ್ಯಕ್ಷ ಕೆ. ನಾಗರಾಜ್, ನಿರ್ದೇಶಕರುಗಳಾದ ಹೆಚ್. ಶರಣಪ್ಪ, ಗೌರಮ್ಮ, ವನಜಾಕ್ಷಮ್ಮ ಕೊಟ್ರೇಶಪ್ಪ, ರಾಮಪ್ಪ, ನಾಗಪ್ಪ, ಕೊಟ್ರೇಶ್, ಜ್ಯೋತಿರ್ಲಿಂಗ, ಜಿ. ಸಿದ್ದೇಶ್, ಅಂಜಿನಪ್ಪ, ಕೆ. ಆರ್. ಸಿದ್ದೇಶ್, ವೃತ್ತನಿರೀಕ್ಷಕ ಅಂಜಿನಪ್ಪ, ಕಾರ್ಯನಿರ್ವ ಹಣಾಧಿಕಾರಿ ಕೆ. ಭೀಮಪ್ಪ, ಮುಖಂಡರಾದ ಬಾಲೇನಹಳ್ಳಿ ಕೆಂಚನಗೌಡ, ಮಾದಿಹಳ್ಳಿ ನಿ.ಶಿಕ್ಷಕ ಚಂದ್ರಪ್ಪ, ಕಬ್ಬಳ್ಳಿ ಬಸವರಾಜ್, ವೀರೇಶ್, ಶೇಖರಪ್ಪ, ಶಿವಣ್ಣ, ಸಿಬ್ಬಂದಿ ವರ್ಗದವರು ಹಾಗೂ ಸುತ್ತಮುತ್ತಲಿನ ಊರಿನ ಮುಖಂಡರು ಹಾಜರಿದ್ದರು.

## ನಗರದಲ್ಲಿ ನಾಳೆ ವಾಸ್ಕ್ಯುಲರ್ ಶಸ್ತ್ರ ಚಿಕಿತ್ಸಾ ಸಮಾಲೋಚನೆ

ದಾವಣಗೆರೆ, ಆ. 18 - ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಬಿ. ರಾಜೇಂದ್ರ ಪ್ರಸಾದ್ ಅವರು ನಗರದ ಆರೈಕೆ ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 20ರ ಭಾನುವಾರ ಬೆಳಿಗ್ಗೆ 10 ರಿಂದ 1 ರವರೆಗೆ ಸಮಾಲೋಚನೆಗೆ ಲಭ್ಯವಿರಿರುತ್ತಾರೆ.

ಉಬ್ಬಿರುವ ರಕ್ತನಾಳಗಳು, ಕೈ ಮತ್ತು ಕಾಲುಗಳ ಊತ ಮತ್ತು ನೋವು, ಮಧುಮೇಹ, ಡಯಾಲಿಸಿಸ್, ವಾಸಿಯಾಗದ ಗಾಯಗಳು, ಗ್ಯಾಂಗ್ರೀನ್ ಮುಂತಾದ ಸಮಸ್ಯೆಗಳ ಬಗ್ಗೆ ತಜ್ಞರ ಜೊತೆ ಸಮಾಲೋಚನೆ ಮಾಡಲು ಬಯಸುವವರು ಮೊ. 80505 60580 ನಂಬರ್‌ಗೆ ಸಂಪರ್ಕಿಸಬಹುದು.

## ಜಗಳೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಗಳೂರು, ಬಿದರಕೆರೆ ಹಾಗೂ ಹಿರೇಮಲ್ಲನಹೊಳೆ ವಿ.ವಿ ಕೇಂದ್ರದ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳ ಜೆ.ಎನ್.ವೈ ಮಾರ್ಗಗಳು, ನೀರಾವರಿ ಪಂಪ್‌ಸೆಟ್ಟು ಮಾರ್ಗಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.




ನೋಂದಣಿ ಸಂಖ್ಯೆ: ಡಿ.ಆರ್. ಡಿ.ವಿ.ಜಿ. ಆರ್.ಎಸ್.ಆರ್/ಸೌನೋ/2652/2013-14 ದಿನಾಂಕ 12.7.2013

ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ,

# 56/11ಬಿ, ಮೊದಲನೇ ಮಹಡಿ, ಹಳೆ ಮಾಧ್ಯಮಿಕ ಶಾಲೆ ರಸ್ತೆ, ದಾವಣಗೆರೆ-577001., ದೂರವಾಣಿ: 08192 233700



11ನೇ ಸಾಮಾನ್ಯ ಸಭೆಯ ನೋಟಿಸ್

ಮಾನ್ಯ ಸದಸ್ಯರುಗಳ ಗಮನಕ್ಕೆ

ಸಹಕಾರಿಯ 2022-23ನೇ ಸಾಲಿನ 11ನೇ ಸಾಮಾನ್ಯ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಸಿ.ಉಮಾಪತಿ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ 10/09/2023ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಕಲಾ ಪ್ರಕಾಶವೃಂದ (ರಿ.) ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಸಹಕಾರ ಸಮುದಾಯ ಭವನ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ-577 004 ಇಲ್ಲಿ ಕರೆಯಲಾಗಿದೆ. ಈಗಾಗಲೇ ಅರ್ಹ ಸದಸ್ಯರುಗಳಿಗೆ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಆದಾಗ್ಯೂ ಈ ಆಹ್ವಾನ ಪತ್ರಿಕೆ ಮೂಲಕ ಅರ್ಹ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಬೇಕೆಂದು ಆಡಳಿತ ಮಂಡಳಿಯ ಪರವಾಗಿ ವಿನಂತಿಸಲಾಗಿದೆ.

| ಕ್ರ.ಸಂ | ವಿವರ | 2020-21 | 2021-22 | 2022-23 |
|---|---|---|---|---|
| 1 | ಸದಸ್ಯರ ಸಂಖ್ಯೆ | 2658 | 2731 | 2801 |
| 2 | ಷೇರು ಬಂಡವಾಳ | 1,13,97,408.00 | 1,15,82,144.00 | 1,39,37,528.00 |
| 3 | ನಿಧಿಗಳು/ಸ್ವಂತ ಬಂಡವಾಳ | 1,24,32,906.58 | 1,34,71,579.16 | 1,66,15,805.16 |
| 4 | ಸದಸ್ಯರ ಠೇವಣಿಗಳು | 10,01,57,130.21 | 11,64,93,695.21 | 12,06,03,754.21 |
| 5 | ಸದಸ್ಯರಿಗೆ ವಿತರಿಸಿದ ಸಾಲಗಳು | 7,83,40,132.00 | 7,18,68,622.00 | 10,42,14,259.00 |
| 6 | ಹೂಡಿಕೆಗಳು | 3,90,06,000.00 | 7,15,06,000.00 | 70,06,000.00 |
| 7 | ದುಡಿಯುವ ಬಂಡವಾಳ | 12,93,38,269.37 | 14,98,48,023.37 | 16,20,70,811.06 |
| 8 | ನಿವ್ವಳ ಲಾಭ | 40,17,287.58 | 40,97,679.00 | 50,56,729.69 |
| 9 | ಲಾಭಾಂಶ ನೀಡಿಕೆ | 10% | 10% | ಉದ್ದೇಶಿತ 10% |

ಸ್ಥಳ: ದಾವಣಗೆರೆ
ದಿನಾಂಕ 18.08.2023

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ ಸಹಿ/-
(ಚನ್ನಮಲ್ಲಿಕಾರ್ಜುನ ಕೆ), ಕಾರ್ಯದರ್ಶಿ

ಸದಸ್ಯರಿಗೆ ವಿಶೇಷ ಸೂಚನೆ : ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಪ್ರಕಾರ :- ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಕನಿಷ್ಠ ಎರಡು ವಾರ್ಷಿಕ ಸಾಮಾನ್ಯ ಸಭೆಗಳಿಗೆ ಹಾಜರಾಗಿಲ್ಲದಿದ್ದರೆ ಅಥವಾ ಹಿಂದಿನ ಐದು ಸಹಕಾರ ವರ್ಷಗಳಲ್ಲಿ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಿಗಾಗಿ ಉಪವಿಧಿ ನಿರ್ದಿಷ್ಟಪಡಿಸಿರುವ ಕನಿಷ್ಠ ಮಟ್ಟದ ಸಹಕಾರಿಯ ಸೇವೆಯನ್ನು ಬಳಸಿಕೊಂಡಿಲ್ಲದಿದ್ದರೆ; ಅಂತಹ ಸದಸ್ಯರು ಸಭೆ, ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಮತ್ತು ಕಾಯ್ದೆಯ ಪ್ರಕರಣ 20ರನ್ವಯ ಮುಂದಿನ ಒಂದು ವರ್ಷದವರೆಗೆ ಮತದಾನ ಮಾಡಲು ಹಾಗೂ ಚುನಾವಣೆಯಲ್ಲಿ ಭಾಗವಹಿಸಲು ಅನರ್ಹರಾಗುತ್ತಾರೆ.


2022-23ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ ಯಲ್ಲಿ ಶೇ 85 ಕ್ಕಿಂತ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸುವವರು ದಿನಾಂಕ 01-09-2023ರೊಳಗೆ ಸಹಕಾರಿ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಕೋರಲಾಗಿದೆ.



ರೆಜುವಿಯ
ಸ್ಕಿನ್ । ಹೇರ್ । ಲೇಸರ್ ಕ್ಲಿನಿಕ್ & ಆಯುರ್ವೇದ ವೆಲ್‌ನೆಸ್ ಸೆಂಟರ್

REJUVEA
SKIN | HAIR | LASER CLINIC & AYURVEDA WELLNESS CENTER

Rejuvea offers wide range of Skin, Hair & Laser services that can help you Look your Best!



ಆಯುರ್ವೇದ ಚಿಕಿತ್ಸಾ ಸೌಲಭ್ಯಗಳು



ಚಿಕಿತ್ಸಾ ಸೌಲಭ್ಯಗಳು:
ಟ್ಯಾಟು, ಭಂಗು, ಕಲೆಗಳು, ಕೂದಲು ಉದುರುವಿಕೆ, ನರಹುಲಿ, ಕುತ್ತಿಗೆ ಕಪ್ಪು, ಕಾಂತಿಹೀನ ಚರ್ಮ, ಕೆಮಿಕಲ್ ಪೀಲ್, ವ್ಯಾಂಪೈರ್‌ಫೇಷಿಯಲ್, ಹಾಲಿವುಡ್ ಪೀಲ್, ಜಿ.ಎಫ್.ಸಿ., ಆರ್‌ಎಫ್ ಕಾಟರಿ, ಮೈಕ್ರೋನೀಡ್ಲಿಂಗ್.
Tattoo Removal, Pigmentation, Melasma, Acne, Scars, Hairloss, Dandruff, Skintags, Neck / Underarm, Pigmentation, Dullskin, Chemical Peel, Hollywood Peel, Vampirefacial, G.F.C, RF Cautery, Microneedling.

ಚಿಕಿತ್ಸಾ ಸೌಲಭ್ಯಗಳು:
ದೇಹದ ತೂಕ ಹೆಚ್ಚಿದ್ದಲ್ಲಿ Over Weight
ಬೆನ್ನುಮೂಳೆ ನೋವು Back Pain
ಕುತ್ತಿಗೆ ನೋವು Neck & Knee Pain
ಮಂಡಿನೋವು Depression
ಖಿನ್ನತೆ Sleeplessness
ನಿದ್ರಾಹೀನತೆ Allergic Rhinitis
ಅಲರ್ಜಿ Gastric, Acidity
ಗ್ಯಾಸ್ಟ್ರಿಕ್, ಆ್ಯಸಿಡಿಟಿ Whole Body Detox

Scan to Book your Appointment
7975565055
7204203914
Scan to Follow Us
@REJUVEA_DVG
Devaraj Urs B Block Double Road, Davangere-577006.
Scan to Reach Us



'ಕಲ್ಲ ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಸಪ್ತಾಹ

ದಾವಣಗೆರೆಯ ಬಿಜೆಎಂ ಶಾಲೆಯಲ್ಲಿ 'ಕಲ್ಲ ನಾಗರಕ್ಕೆ ಹಾಕುವ ಹಾಲು ಮಕ್ಕಳ ಪಾಲು' ಸಪ್ತಾಹವನ್ನು ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಕ್ಕಳಿಗೆ ಹಾಲು ವಿತರಿಸಿ ಉದ್ಘಾಟಿಸಿದರು. ಜಿಲ್ಲಾ ಪಂಚಾಯಿತಿ ಸಿಇಒ ಸುರೇಶ್ ಬಿ. ಹಿಟ್ನಾಳ್, ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಶಾಲೆಯ ಕಾರ್ಯದರ್ಶಿ ಮಂಜುನಾಥ್ ಅಗಡಿ ಮತ್ತು ಇತರರು ಉಪಸ್ಥಿತರಿದ್ದರು.


## ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಮಾತೃಶ್ರೀ ಗಂಗಮ್ಮ ನಿಧನ

ಚಿತ್ರದುರ್ಗ, ಆ. 18- ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅವರ ಮಾತೃಶ್ರೀ ಗಂಗಮ್ಮ ದುರ್ಗಪ್ಪ ಅವರ ನಿಧನಕ್ಕೆ ಮಾಜಿ ಸಚಿವ ಎಚ್. ಆಂಜನೇಯ ಅತೀವ ದುಃಖ ವ್ಯಕ್ತಪಡಿಸಿದ್ದಾರೆ. ಹೊಳಲ್ಕೆರೆ ತಾಲ್ಲೂಕು ಹಿರೇಕಂದವಾಡಿ ಗ್ರಾಮದ ಸಾಮಾನ್ಯ ಮಹಿಳೆ ಗಂಗಮ್ಮ ಸಂಕಷ್ಟಗಳ ಮಧ್ಯೆ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಆದರ್ಶ ಮಹಿಳೆಯಾಗಿದ್ದಾರೆ. ಸಾಮಾನ್ಯ ಕುಟುಂಬದ ಮಹಿಳೆಯೊಬ್ಬರು ಸಮಾಜದಲ್ಲಿ ಹೇಗೆ ಆದರ್ಶದ ಬದುಕು ನಡೆಸಬಹುದು ಎಂಬುದಕ್ಕೆ ಗಂಗಮ್ಮ ಅವರ ಜೀವನ ಮಾದರಿ ಆಗಿದೆ ಎಂದು ಆಂಜನೇಯ ಸ್ಮರಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಗ್ರಾಹಕರ ಸಂವಾದ

ಪಿ.ಬಿ. ರಸ್ತೆಯಲ್ಲಿರುವ ರಾಣೇಬೆನ್ನೂರು ಉಪವಿಭಾಗ-1 ರಲ್ಲಿ ಗ್ರಾಹಕರ ಸಂವಾದವು ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ನಡೆಯಲಿದೆ. ಗ್ರಾಹಕರು ಹಾಜರಾಗಿ ವಿದ್ಯುತ್ ಸೇವೆಯ ಬಗ್ಗೆ ತಮ್ಮ ಅನಿಸಿಕೆ, ದೂರುಗಳು, ಸಲಹೆಗಳು, ಇತ್ಯಾದಿಗಳನ್ನು ಚರ್ಚಿಸಿ ಪರಿಹರಿಸಿಕೊಳ್ಳಬಹುದು.

# ಇಎಂಐ ಸಾಲಕ್ಕೆ ಸ್ಥಿರ ಬಡ್ಡಿ ಆಯ್ಕೆ ನೀಡಲು ಆರ್.ಬಿ.ಐ. ಸೂಚನೆ



ಮುಂಬೈ, ಆ. 18 – ಇ.ಎಂ.ಐ. ಮೂಲಕ ಸಾಲ ಪಡೆದವರಿಗೆ ಸ್ಥಿರ ಬಡ್ಡಿ ದರ ವ್ಯವಸ್ಥೆ ಇಲ್ಲವೇ ಸಾಲದ ಮರುಪಾವತಿ ಅವಧಿ ವಿಸ್ತರಣೆಯ ಆಯ್ಕೆ ನೀಡಬೇಕು ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಬಡ್ಡಿ ದರ ಹೆಚ್ಚಳವಾದ ಸಂದರ್ಭದಲ್ಲಿ ಸಾಲ ಪಡೆದವರು ಸಂಕಷ್ಟ ಎದುರಿಸುವುದನ್ನು ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಮೇ 2022ರ ನಂತರ ಬಡ್ಡಿ ದರವನ್ನು ಹೆಚ್ಚಿಸಲಾಗುತ್ತಿದೆ. ಹಣದುಬ್ಬರ ತಡೆಯುವ ಸಲುವಾಗಿ ರಿಸರ್ವ್ ಬ್ಯಾಂಕ್ ರೆಪೋ ದರವನ್ನು ಏರಿಕೆ ಮಾಡಿರುವುದೇ ಬಡ್ಡಿ ದರ ಹೆಚ್ಚಳಕ್ಕೆ ಕಾರಣವಾಗಿದೆ.

ಇತ್ತೀಚಿನ ತಿಂಗಳುಗಳಲ್ಲಿ ರೆಪೋ ದರವನ್ನು 250 ಮೂಲ ಅಂಕಗಳಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ಹಲವರು ಪಾವತಿಸುತ್ತಿರುವ ಕಂತಿನ ಪ್ರಮಾಣಕ್ಕಿಂತ ಬಡ್ಡಿಯೇ ಹೆಚ್ಚಾಗಿದೆ. ಇದರಿಂದಾಗಿ ಮೂಲ ಸಾಲದ ಪ್ರಮಾಣ ಹೆಚ್ಚಾಗುತ್ತಿದೆ. ಇ.ಎಂ.ಐ. ಆಧರಿತ ವೈಯಕ್ತಿಕ ಸಾಲ ನೀಡುವಾಗ ಬ್ಯಾಂಕುಗಳು ಮರು ಪಾವತಿ ಸಾಮರ್ಥ್ಯ ಹಾಗೂ ಬಡ್ಡಿ ದರ ಹೆಚ್ಚಾಗುವ ಸಂದರ್ಭಗಳನ್ನು ಪರಿಗಣಿಸಬೇಕು ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ಬಡ್ಡಿ ದರವನ್ನು ಪರಿಷ್ಕರಿಸುವಾಗ ಸಾಲ ಪಡೆದವರು ಸ್ಥಿರ ಬಡ್ಡಿ ದರ ಆಯ್ಕೆ ಮಾಡಿಕೊಳ್ಳಲು, ಇಲ್ಲವೇ ಸಾಲ ಮರು ಪಾವತಿ ಅವಧಿ ಹೆಚ್ಚಿಸಲು ಆಯ್ಕೆ ನೀಡಬೇಕು. ಬಡ್ಡಿ ದರ ಹೆಚ್ಚಾದ ಸಂದರ್ಭದಲ್ಲಿ ಆಗುವ ಪರಿಣಾಮಗಳ ಬಗ್ಗೆಯೂ ಸಾಲ ಪಡೆಯುವಾಗ ತಿಳಿಸಬೇಕು ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

# ಕಾವೇರಿ, ಮಹದಾಯಿ ಬಗ್ಗೆ ಸರ್ವಪಕ್ಷಗಳ ಸಭೆ!

ಬೆಂಗಳೂರು, ಆ. 18 - ಕಾವೇರಿ ಹಾಗೂ ಮಹದಾಯಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಸರ್ವಪಕ್ಷಗಳ ನಾಯಕರ ಸಭೆ ಕರೆಯುವ ಬಗ್ಗೆ ಚಿಂತನೆ ನಡೆದಿದೆ ಎಂದು ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ತಿಳಿಸಿದ್ದಾರೆ.

ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಸರ್ವಪಕ್ಷಗಳ ಸಭೆ ಕರೆಯುವ ಮಾತನಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಮೈತ್ರಿ ಉದ್ದೇಶದಿಂದ ತಮಿಳುನಾಡಿಗೆ ನೀರು ಹರಿಸಿಲ್ಲ. ನ್ಯಾಯಾಲಯದ ಆದೇಶ ಗೌರವಿಸಿ, ಅದನ್ನು ಪಾಲಿಸಿದ್ದೇವೆ. ಜೊತೆಗೆ ನಮ್ಮ ರೈತರ ಹಿತವನ್ನು ಕಾಯಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ತನ್ನ ನಿರ್ಧಾರ ಪುನರ್ ಪರಿಶೀಲಿಸುವಂತೆ ಮನವಿ ಮಾಡಿದ್ದೇವೆ ಎಂದರು.

## ನಾಡಿದ್ದು ಪಂಚ ದೇವಸ್ಥಾನದಲ್ಲಿ ಈಶ್ವರ ಲಿಂಗು ಪ್ರತಿಷ್ಠಾಪನೆ



ದಾವಣಗೆರೆ, ಆ. 18 - ನಗರದ ಪಿ.ಬಿ. ರಸ್ತೆಯಲ್ಲಿರುವ ಶ್ರೀ ಪಂಚ ದೇವಸ್ಥಾನದಲ್ಲಿ ಈಶ್ವರ ಲಿಂಗು ಪ್ರತಿಷ್ಠಾಪನೆಯನ್ನು ಹಮ್ಮಿಕೊಳ್ಳಲಾಗಿದೆ. ದಿನಾಂಕ 21.08.2023ರ ಸೋಮವಾರ ಬೆಳಿಗ್ಗೆ 7 ಗಂಟೆಯ ಶುಭ ಮುಹೂರ್ತದಲ್ಲಿ ನೆರವೇರಲಿದೆ.

## ಹದಿಹರೆಯದ ಸಹಮತಿ ಸಂಬಂಧ ಅಪರಾಧ ಮುಕ್ತಗೊಳಿಸಲು ನೋಟಿಸ್

ನವದೆಹಲಿ, ಆ. 18 - 16 ರಿಂದ 18 ವಯಸ್ಸಿನ ಹದಿಹರೆಯದವರ ಸಹಮತಿಯ ಸಂಬಂಧವನ್ನು ಅಪರಾಧ ಮುಕ್ತಗೊಳಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಮತ್ತು ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ನೋಟಿಸ್ ಕಳಿಸಿದೆ. ವಕೀಲ ಹರ್ಷ ವಿಭೋರೆ ಸಿಂಘಲ್ ಎಂಬುವವರು ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು. ಈಗಿರುವ ಕಾನೂನಿನಲ್ಲಿ 18 ವರ್ಷದೊಳಗಿನವರು ಲೈಂಗಿಕ ಸಂಬಂಧಕ್ಕೆ ಸಹಮತಿ ನೀಡುವುದನ್ನು ಪರಿಗಣಿಸುವುದಿಲ್ಲ.


GM Group of Institution Davanagere.



ಬಸ್ ಚಾಲಕರು ಕಂ ಅಟೆಂಡರ್ಸ್ ಬೇಕಾಗಿದ್ದಾರೆ

ಹೆವಿ ಲೈಸೆನ್ಸ್‌ವುಳ್ಳ ಅನುಭವಿ ಬಸ್ ಚಾಲಕರು ದಾವಣಗೆರೆ ಮತ್ತು ಹರಿಹರದಿಂದ ಜಿ.ಎಂ.ಐ.ಟಿ ಕಾಲೇಜಿಗೆ ಕರೆತರಲು ಜವಾಬ್ದಾರಿಯುತವಾದ 10 ಬಸ್ ಚಾಲಕರು ಕಂ ಅಟೆಂಡರ್ಸ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ ನೀಡಲಾಗುವುದು.
ಆಸಕ್ತ ಚಾಲಕರು ತಮ್ಮ ಇತ್ತೀಚಿನ ಭಾವಚಿತ್ರ, ಆಧಾರ ಕಾರ್ಡ್, ಹೆವಿ ಲೈಸೆನ್ಸ್ ಪ್ರತಿಗಳೊಂದಿಗೆ ಈ ನೇರ ಸಂದರ್ಶನಕ್ಕೆ ಹಾಜರಾಗಿ.

86187-85510
84948-84444



## ಕೃತಜ್ಞತೆಗಳು

ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ ನಿರ್ದೇಶಕರಾಗಿ ನಾನು ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಜಿ.ಗುರುಸಿದ್ಧಯ್ಯನವರಿಗೂ, ಉಪಾಧ್ಯಕ್ಷರಾದ ಶ್ರೀ ನಿರಂಜನ್ ನಿಶಾನಿಮಠ್‌ರವರಿಗೂ, ಆಡಳಿತ ಮಂಡಳಿ ಎಲ್ಲಾ ನಿರ್ದೇಶಕರಿಗೂ, ಸಿಇಒ ಶ್ರೀ ಎನ್. ಮಂಜುನಾಥ್ ಅವರಿಗೂ, ಸಿಬ್ಬಂದಿ ವರ್ಗದವರಿಗೂ, ಪ್ರತ್ಯಕ್ಷ - ಪರೋಕ್ಷವಾಗಿ ನನ್ನ ಆಯ್ಕೆಗೆ ಸಹಕರಿಸಿದ ಸರ್ವರಿಗೂ

ನನ್ನ ಹೃದಯ ತುಂಬಿದ ಕೃತಜ್ಞತೆಗಳು.



ಅಭಿಷೇಕ್ ಬೇತೂರು
ನಿರ್ದೇಶಕರು
ಸಿಟಿ ಕೋ- ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.



ಡಿಸ್ಕೌಂಟ್

T&C ಸೆಲೆಕ್ಟೆಡ್ ಬಟ್ಟೆಗಳ ಮೇಲೆ ಮಾತ್ರ ಈ ಆಫರ್ ಅನ್ವಯ ಆಗುತ್ತದೆ..

ದಾವಣಗೆರೆಯ ತೂಕದ ಲೆಕ್ಕದ ಬಟ್ಟೆ ಅಂಗಡಿಯಲ್ಲಿ ಬಟ್ಟೆಗಳು ಈಗ ಒಂದು ಕೆಜಿಗೆ

ಕೇವಲ ~~899~~ 499₹

ಫೋನ್ : 73386 02813







## ಪ್ರಥಮ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಪ್ರಿಯಾ ವಿಶ್ವನಾಥ ರಾಯ್ಕರ್‌ರವರು
ಮರಣ : 31.07.2022
ಶ್ರೀ ವಿಶ್ವನಾಥ್ ರಾಮಕಾಂತ ರಾಯ್ಕರ್ ಇವರ ಧರ್ಮಪತ್ನಿ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು
ನಿಮ್ಮ ಪ್ರೀತಿ, ಮಮತೆ, ಸವಿನೆನಪು
ನಮ್ಮೆಲ್ಲರನ್ನು ಸದಾ ಕಾಡುತ್ತಿರುತ್ತದೆ....

*ಸದಾ ನಿಮ್ಮ ಸ್ಮರಣೆಯಲ್ಲಿರುವ....*

ಶ್ರೀ ವಿಶ್ವನಾಥ್ ರಾಮಕಾಂತ್ ರಾಯ್ಕರ್
ಶ್ರೀ ಅಜೆಯ್ ವಿಶ್ವನಾಥ್ ರಾಯ್ಕರ್
ಶ್ರೀ ರಿಯಾ ವಿಶ್ವನಾಥ್ ರಾಯ್ಕರ್
ಹಾಗೂ ಬಂಧು-ಮಿತ್ರರು

ಕಾಮಾಕ್ಷಿ ಜ್ಯೂಯಲರಿ, ಬಿ.ಟಿ.ಗಲ್ಲಿ, ದಾವಣಗೆರೆ. ಫೋನ್ : 94830 46777

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 17-8-2023ರಂದು ನಿಧನರಾದ
ನಗರದ ಮಹಾಲಕ್ಷ್ಮಿ ಸ್ಯಾನಿಟರಿ ವೇರ್ ಮಾಲೀಕರು,
ಆತ್ಮೀಯ ಮಿತ್ರರಾಗಿದ್ದ
ಶ್ರೀ ಷಾ ಶೈಲೇಶ್‌ಕುಮಾರ್ ನವಲ್‌ಮಲ್‌ಜೀ
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿಗಳು.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

✦ ಪ್ರಕಾಶ್ ಚಂದ್‌ಜೀ ✦ ಹುಕುಂ ಚಂದ್‌ಜೀ
✦ ಕಿಶೋರ್ ಗಾಂಧಿ ✦ ಕಿರಣ್ ರಾಜ್ ✦ ಅಂಬಾಲಾಲ್ ಪಿ.
✦ ಅಶೋಕ್ ರಾಯ್‌ಗಾಂಧಿ ✦ ಪವನ್ ಗಾಂಧಿ
✦ ರಾಜು ವಿ.ಎಂ. ✦ ಕಿಶೋರ್ (ಬಿ.ಡಿ.)
✦ ಜೀತೇಂದ್ರ .ವಿ ಜೈನ್ ✦ ಪ್ರಭು (ಶಿವಾಲಿ)

## ಅವಧ್ ನರೈನ್ ಅಗರ್‌ವಾಲ್ ನಿಧನ



ಅವಧ್ ನರೈನ್ ಅಗರ್‌ವಾಲ್

ದಿನಾಂಕ : 18.08.2023ರ ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು, ನಾಲ್ಕು ಜನ ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಶನಿವಾರ ಬೆಳಿಗ್ಗೆ 9.00 ಗಂಟೆಯವರೆಗೆ ಮೃತರ ಸ್ವಗೃಹ, # 2753, 3ನೇ ಮೇನ್, 4ನೇ ಕ್ರಾಸ್, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ ಇಲ್ಲಿ ಇರಿಸಲಾಗುವುದು. ನಂತರ ಬೆಳಿಗ್ಗೆ 10.00 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಇವರ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

*ಇಂತಿ ದುಃಖತಪ್ತ ಕುಟುಂಬ ವರ್ಗ :*

ಮಕ್ಕಳು -ಸೊಸೆಯಂದಿರು : ಪಂಕಜ್ ಅಗರ್‌ವಾಲ್ ಮತ್ತು ಶ್ರೀಮತಿ ಕವಿತ ಅಗರ್‌ವಾಲ್
ನೀರಜ್ ಅಗರ್‌ವಾಲ್ ಮತ್ತು ಶ್ರೀಮತಿ ಬಬಿತ ಅಗರ್‌ವಾಲ್
ಡಾ|| ರಾಜೀವ್ ಅಗರ್‌ವಾಲ್ ಮತ್ತು ಡಾ|| ಶ್ರೀಮತಿ ನಾಗಮಣಿ ಅಗರ್‌ವಾಲ್
ಅರವಿಂದ್ ಅಗರವಾಲ್ ಮತ್ತು ಶ್ರೀಮತಿ ಪ್ರೀತಿ ಅಗರ್‌ವಾಲ್
ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು, ದಾವಣಗೆರೆ.

ಫೋನ್ : 93422 38516, 9341891072

## ಹೃದಯಪೂರ್ವಕ ಅಭಿನಂದನೆಗಳು







ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ, ದೊಡ್ಡಬಾತಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಚುನಾವಣೆ
ದಿನಾಂಕ : 18,08.2023 ರಂದು ನಡೆದ
ಚುನಾವಣಾ ಪ್ರಕ್ರಿಯೆಯಲ್ಲಿ ದೊಡ್ಡಬಾತಿ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವ
ಶ್ರೀಮತಿ ಟಿ. ಮಂಜುಳಾ ಕೋಂ. ಜಿ.ಸಿ.ಪಿ.ಹನುಮಂತಪ್ಪ
ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ
ಶ್ರೀ ಬಾನಳ್ಳಿ ಸಿದ್ದಪ್ಪನವರಿಗೆ
ಹೃದಯಪೂರ್ವಕ ಅಭಿನಂದನೆಗಳು.



ಶ್ರೀಮತಿ ಮಂಜುಳಾ ಕೋಂ ಜಿಸಿಪಿ ಹನುಮಂತಪ್ಪ
ಅಧ್ಯಕ್ಷರು



ಶ್ರೀ ಬಾನಳ್ಳಿ ಸಿದ್ದಪ್ಪ
ಉಪಾಧ್ಯಕ್ಷರು



ಆರ್. ಬಸವರಾಜ್
ಮುದಹದಡಿ

ಜೆ.ಸಿ.ಪಿ
ರೇವಣಸಿದ್ದಪ್ಪ ಆರ್.
ದೊಡ್ಡಬಾತಿ.



ಹಾಗೂ ದೊಡ್ಡಬಾತಿ ಗ್ರಾಮಸ್ಥರು, ದೊಡ್ಡಬಾತಿ.